
सत्यमेव जयते

ಭಾರತ ಸರ್ಕಾರದ ಪ್ರಧಾನ ಮಂತ್ರಿಯ
ಆರ್ಥಿಕ ಸಲಹಾ ಮಂಡಳಿ

# ಭಾರತದ ನೀಲಿ ಆರ್ಥಿಕತೆ

# ಕರಡು ನೀತಿಯ ಚೌಕಟ್ಟು



1 ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನೀಲಿ ಆರ್ಥಿಕತೆಗೆ ನೀಡಿದ ಪ್ರಾಮುಖ್ಯತೆಯನ್ನು ಅನುಸರಿಸಿ, ಪ್ರಧಾನಮಂತ್ರಿಯ ಆರ್ಥಿಕ ಸಲಹಾ ಮಂಡಳಿಯು (ಇಎಸಿ-ಪಿಎಂ), ನೀಲಿ ಆರ್ಥಿಕತೆಗೆ ಒಂದು ನೀತಿ ಮಾರ್ಗವನ್ನು ರೂಪಿಸುವ ಉಪಕ್ರಮವನ್ನು ಕೈಗೆತ್ತಿಕೊಂಡಿದೆ. ಈ ಡೊಮೇನ್ನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಸಚಿವಾಲಯಗಳು, ಇಲಾಖೆಗಳು ಮತ್ತು ಏಜೆನ್ಸಿಗಳ ಅಂತರ ಮತ್ತು ಒಳಗೊಳ್ಳುವಿಕೆಯನ್ನು ಗಮನಿಸಿದರೆ, ಸಮಸ್ಯೆಗಳನ್ನು ಪರಿಹರಿಸಲು ಒಂದು ಏಕೀಕೃತ ಮತ್ತು ಸಂಘಟಿತ ಪ್ರಯತ್ನದ ತುರ್ತು ಅಗತ್ಯವಿದೆ, ಏಕೆಂದರೆ ಅವು ಸ್ಥೂಲ-ಆರ್ಥಿಕ ಪರಿಣಾಮಗಳನ್ನು ಹೊಂದಿವೆ.

2 ಭಾರತದ ನೀಲಿ ಆರ್ಥಿಕತೆಗಾಗಿ ಒಂದು ಕರಡು ನೀತಿಯನ್ನು ಪ್ರಸ್ತುತಪಡಿಸುವುದು ನನ್ನ ಭಾಗ್ಯವಾಗಿದೆ. ಸಂಬಂಧಿತ ಸಚಿವಾಲಯಗಳು, ಥಿಂಕ್ ಟ್ಯಾಂಕ್ಗಳು ಮತ್ತು ತಜ್ಞರೊಂದಿಗೆ ಹಲವಾರು ಸುತ್ತಿನ ಚರ್ಚೆಗಳ ನಂತರ ಇದನ್ನು ರೂಪಿಸಲಾಗಿದೆ. ಈ ಕರಡು ಭಾರತ ಸರ್ಕಾರವು ಅಳವಡಿಸಿಕೊಳ್ಳಬಹುದಾದ ಧ್ಯೇಯ ಮತ್ತು ತಂತ್ರ ಎರಡನ್ನೂ ವ್ಯಕ್ತಪಡಿಸುತ್ತದೆ. ಈ ಅಭ್ಯಾಸವು ಜನರಿಗೆ ಉತ್ತಮ ಆರ್ಥಿಕ ಭವಿಷ್ಯವನ್ನು ಸುಸ್ಥಿರ ರೀತಿಯಲ್ಲಿ ಪಡೆಯಲು ನೀಲಿ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅಡಿಪಾಯವಾಗಬಹುದು.

3 ನೀಲಿ ಆರ್ಥಿಕತೆ ಉಪಕ್ರಮದ ಅಡಿಯಲ್ಲಿರುವ ಏಳು ಕಾರ್ಯಕಾರಿ ಗುಂಪುಗಳ ಅಧ್ಯಕ್ಷರು, ಸಂಚಾಲಕರು, ಸದಸ್ಯರು ಮತ್ತು ಸಂಬಂಧಿತ ಯುವ ವೃತ್ತಿಪರರಿಗೆ ಅವರ ಪ್ರಯತ್ನಗಳಿಗಾಗಿ ನಾನು ಧನ್ಯವಾದ ಅರ್ಪಿಸುತ್ತೇನೆ. ಅವರ ಬೆಂಬಲವು ಬಹಳ ಮಹತ್ವದ್ದಾಗಿದೆ. ನೀಲಿ ಆರ್ಥಿಕತೆಯ ವಿಭಿನ್ನ ಆಯಾಮಗಳನ್ನು ಸಂಗ್ರಹಿಸುವ ಸಮಗ್ರ ವರದಿಗಳ ಸರಣಿಗೆ ಅವರು ಕೊಡುಗೆ ನೀಡಿದ್ದಾರೆ. ಪ್ರತಿಯೊಂದು ವರದಿಯು ಅಸ್ತಿತ್ವದಲ್ಲಿರುವ ಮತ್ತು ಹೊರಹೊಮ್ಮುತ್ತಿರುವ ಸವಾಲುಗಳನ್ನು ಗುರುತಿಸಿದೆ ಹಾಗೂ ಪ್ರತಿ ವಲಯದಲ್ಲಿನ ಬೃಹತ್ ಸಾಮರ್ಥ್ಯ ಮತ್ತು ಅವಕಾಶಗಳನ್ನು ಸೆರೆಹಿಡಿಯಲು ದೃಢವಾದ ಶಿಫಾರಸುಗಳನ್ನು ಮಾಡಿದೆ. ಈ ಸಂಕೀರ್ಣ ಅಭ್ಯಾಸದ ಪೂರ್ಣಗೊಳಿಸುವಿಕೆಯನ್ನು ಅನುಸರಣೆ-ಮಾಡಿದ ಮತ್ತು ಸಹಕರಿಸಿದ ಮುಖ್ಯ ಸಂಚಾಲಕ ಅಧಿಕಾರಿಯಾಗಿರುವ ಇಎಸಿ-ಪಿಎಂನ ಹಿರಿಯ ಸಲಹೆಗಾರ್ತಿ ಡಾ. ಸುಮಿತಾ ಮಿಶ್ರಾ ಅವರ ಕೊಡುಗೆಯನ್ನು ನಾನು ಪ್ರಶಂಸಿಸುತ್ತೇನೆ. ಸ್ಟೀರಿಂಗ್ ಕಮಿಟಿಯ ಸದಸ್ಯರು ಚರ್ಚೆಯ ಸಮಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದ ಅರ್ಪಿಸುತ್ತೇನೆ.

4 ಈ ಡಾಕ್ಯುಮೆಂಟ್ ಭಾರತ ಸರ್ಕಾರದ ನೀಲಿ ಆರ್ಥಿಕತೆ ಉಪಕ್ರಮಕ್ಕೆ ಅರ್ಥಪೂರ್ಣ ಕೊಡುಗೆ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ.

ರತನ್ ಪಿ. ವಾಟಲ್ ಸದಸ್ಯ ಕಾರ್ಯದರ್ಶಿ
ಇಎಸಿ-ಪಿಎಂ

## United Nations Sustainable Development Goal 14

**"Conserve and sustainably use the oceans seas and marine resources for sustainable development"**




"To me the Blue Chakra or wheel in India's national flag represents the potential of Blue Revolution or the Ocean Economy. That is how central the ocean economy is to us".

– Shri Narendra Modi
Prime Minister of India



**INDIA & ITS TERRITORIAL WATERS**




Source : Ministry of Earth Sciences, 2019

## 1. ಭಾರತದ ನೀಲಿ ಆರ್ಥಿಕತೆಯ ಧ್ಯೇಯ

1.1 ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾಗುವ ಅಪಾಯಗಳ ಜೊತೆಗೆ ಭವಿಷ್ಯದ ಬೆಳವಣಿಗೆ ಮತ್ತು ಸಮೃದ್ಧಿಯ ಅಗತ್ಯಗಳನ್ನು ಪ್ರತಿಬಿಂಬಿಸಲು ಯುನೈಟೆಡ್ ನೇಶನ್ಸ್ ಯೂನಿವರ್ಸಿಟಿಯಲ್ಲಿ (ಯುಎನ್ಯು) ಪ್ರೊಫೆಸರ್ ಗುಂಟರ್ ಪೌಲಿ ಅವರು 1994 ರಲ್ಲಿ ನೀಲಿ ಆರ್ಥಿಕತೆಯ ಆರ್ಥಿಕ ತತ್ವಶಾಸ್ತ್ರವನ್ನು ಮೊದಲು ಪರಿಚಯಿಸಿದರು. "ತ್ಯಾಜ್ಯವಿಲ್ಲ ಮತ್ತು ಹೊರಸೂಸುವಿಕೆ ಇಲ್ಲ" ಎಂಬ ಆಧಾರದ ಮೇಲಿನ ಎಂಜಿನಿಯರಿಂಗ್ ಪರಿಕಲ್ಪನೆಗಳನ್ನು ಒಳಗೊಂಡಂತೆ, ಅಭಿವೃದ್ಧಿಯ ಹೆಚ್ಚು ಸುಸ್ಥಿರ ಮಾದರಿಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಈ ಪರಿಕಲ್ಪನೆಯು ಆಧರಿಸಿದೆ. 2012 ರಲ್ಲಿ ನಡೆದ ಮೂರನೇ ಭೂ ಶೃಂಗಸಭೆ ಸಮಾವೇಶ - ರಿಯೊ+20 ರ ನಂತರ ನೀಲಿ ಆರ್ಥಿಕತೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಈ ಸಮ್ಮೇಳನವು ಇತರ ವಿಷಯಗಳ ನಡುವೆ ನೀಲಿ ಆರ್ಥಿಕತೆಯನ್ನು ಸೇರಿಸಲು ಹಸಿರು ಆರ್ಥಿಕತೆಯ ಪರಿಕಲ್ಪನೆಯನ್ನು ವಿಸ್ತರಿಸುವ ಬಗ್ಗೆ ಗಮನ ಹರಿಸಿತು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ 14, ಜಾಗತಿಕ ಆಡಳಿತ ಮತ್ತು ಸಾಗರ ಸಂಪನ್ಮೂಲಗಳ ಬಳಕೆಗೆ ಮಾರ್ಗದರ್ಶಿ ಸೂತ್ರವಾಗಿ "ಸಾಗರಗಳು, ಸಮುದ್ರಗಳು ಮತ್ತು ಸಮುದ್ರ ಸಂಪನ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಂರಕ್ಷಿಸಲು ಮತ್ತು ಸುಸ್ಥಿರವಾಗಿ ಬಳಸಲು" ಪ್ರಯತ್ನಿಸಿದಾಗ ಈ ಪರಿಕಲ್ಪನೆಯು ಒಂದು ಉತ್ತೇಜನವನ್ನು ಪಡೆಯಿತು. ಹಲವಾರು ಸದಸ್ಯ ರಾಷ್ಟ್ರಗಳು ಈಗ ನೀಲಿ ಆರ್ಥಿಕತೆಯ ತಮ್ಮದೇ ಆದ ವ್ಯಾಖ್ಯಾನಗಳು ಮತ್ತು ಮಾದರಿಗಳನ್ನು ರೂಪಿಸಿವೆ. ಜಾಗತಿಕವಾಗಿ, ಸಾಂಕ್ರಾಮಿಕ-ರೋಗಕ್ಕಿಂತ ಮೊದಲಿನ ಒಇಸಿಡಿ ಅಂದಾಜಿನ ಪ್ರಕಾರ, ನೀಲಿ ಆರ್ಥಿಕತೆಯು ವಿಶ್ವದ ಉಳಿದ ಆರ್ಥಿಕತೆಗಿಂತ ಎರಡು ಪಟ್ಟು ಹೆಚ್ಚಿನ ದರದಲ್ಲಿ ಬೆಳೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ನೀಲಿ ಆರ್ಥಿಕತೆಯ ಮೌಲ್ಯವರ್ಧನೆಯು ಕರಾವಳಿ ಉತ್ಪಾದನೆ ಮತ್ತು ಸೇವೆಗಳು, ಕಡಲ ವ್ಯಾಪಾರ, ಹಡಗು-ಸಾಗಣೆ, ಕಡಲಾಚೆಯ ಮತ್ತು ಕರಾವಳಿ ಇಂಧನ, ಆಳ ಸಮುದ್ರದ ಖನಿಜಗಳು, ಜಲಚರ ಸಾಕಣೆ ಮತ್ತು ಮೀನುಗಾರಿಕೆ, ಮತ್ತು ಸಮುದ್ರ-ಸಂಬಂಧಿತ ತಂತ್ರಜ್ಞಾನಗಳಿಂದ ಉಂಟಗುತ್ತದೆ ಎಂಬುದನ್ನು ಗಮನಿಸಬೇಕು.

1.2 ನೀಲಿ ಆರ್ಥಿಕತೆಯನ್ನು ಸದುಪಯೋಗಪಡಿಸಿಕೊಳ್ಳಲು ಪ್ರಪಂಚದಾದ್ಯಂತ ವಿವಿಧ ರಾಷ್ಟ್ರೀಯ ಮತ್ತು ಜಾಗತಿಕ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆಸ್ಟ್ರೇಲಿಯಾ, ಬ್ರೆಜಿಲ್, ಯುಕೆ, ಯುಎಸ್, ರಷ್ಯಾ ಮತ್ತು ನಾರ್ವೆಯಂತಹ ದೇಶಗಳು ಅಳೆಯಬಹುದಾದ ಫಲಿತಾಂಶಗಳು ಮತ್ತು ಬಜೆಟ್ ನಿಬಂಧನೆಗಳೊಂದಿಗೆ ಮೀಸಲಾದ ರಾಷ್ಟ್ರೀಯ ಸಾಗರ ನೀತಿಗಳನ್ನು ಅಭಿವೃದ್ಧಿಪಡಿಸಿವೆ. ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ದೇಶಗಳು ನೀಲಿ ಆರ್ಥಿಕತೆಯ ಗುರಿಗಳ ಪ್ರಗತಿ ಮತ್ತು ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಫೆಡರಲ್ ಮತ್ತು ರಾಜ್ಯ ಮಟ್ಟದಲ್ಲಿ ಶಾಸನಗಳನ್ನು ಜಾರಿಗೆ ತಂದಿವೆ ಹಾಗೂ ಶ್ರೇಣಿ-ವ್ಯವಸ್ಥೆಯ ಸಂಸ್ಥೆಗಳನ್ನು ಸ್ಥಾಪಿಸಿವೆ.

1.3 ಭಾರತವು 1981 ರಲ್ಲಿ ಸಾಗರ ಅಭಿವೃದ್ಧಿ ಇಲಾಖೆಯನ್ನು ರಚಿಸಿದ ವಿಶ್ವದಲ್ಲೇ ಮೊದಲನೆಯ ದೇಶವಾಗಿದೆ, ಅದು ಈಗ ಭೂ ವಿಜ್ಞಾನ ಇಲಾಖೆ (ಎಂಒಇಎಸ್) ಆಗಿದೆ. ಮೂರು ದಶಕಗಳಿಗಿಂತಲೂ ಹೆಚ್ಚಿನ ಅನುಭವದ ಆಧಾರದ ಮೇಲೆ ಭಾರತವು, "ಡೀಪ್ ಓಷನ್ ಮಿಷನ್," "ಓಶನೊಗ್ರಫಿ ಫ್ರಮ್ ಸ್ಪೇಸ್" ಮತ್ತು "ಲಾಂಚಿಂಗ್ ಆಫ್ ದಿ ಡೇಟಾ ಬಾಯ್ಸ್" ಮುಂತಾದ ಹೊಸ ಕಾರ್ಯಕ್ರಮಗಳನ್ನು ಭಾರತದ ಕರಾವಳಿಯುದ್ದಕ್ಕೂ ಪ್ರಾರಂಭಿಸುವುದರೊಂದಿಗೆ ಬಹಳ ದೂರ ಸಾಗಿದೆ. ಈ ಉಪಕ್ರಮಗಳು ವೈಜ್ಞಾನಿಕ ವಿಶ್ಲೇಷಣೆಗಾಗಿ ಹವಾಮಾನ ಸೇರಿದಂತೆ ವಿವಿಧ ಸಮುದ್ರಶಾಸ್ತ್ರೀಯ ವೈಶಿಷ್ಟ್ಯಗಳ ಬಗ್ಗೆ ದತ್ತಾಂಶವನ್ನು ರವಾನಿಸಲು ಉಪಗ್ರಹಗಳಿಗೆ ಅನುವು ಮಾಡಿಕೊಟ್ಟಿವೆ. ಎಸ್ಡಿಜಿ-14 ರ ಭಾಗವಾಗಿರುವ ಸಾಗರಗಳಲ್ಲಿ ಕಡಲಿನ ತ್ಯಾಜ್ಯ/ಪ್ಲಾಸ್ಟಿಕ್ ಅನ್ನು ಅಂದಾಜು ಮಾಡಲು ಮತ್ತು ಕಡಿಮೆ ಮಾಡಲು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು "ಕ್ಲೀನ್ ಸೀಸ್ ಪ್ರೋಗ್ರಾಂ" ನಲ್ಲಿ ಎಂಒಇಎಸ್ ವಿಶ್ವಸಂಸ್ಥೆಯನ್ನು ಸೇರಿಕೊಂಡಿದೆ. ಹಿಂದೂ ಮಹಾಸಾಗರದಲ್ಲಿ ಖನಿಜಗಳ

(ಪ್ಲಾಯ್ಮೆಟಾಲಿಕ್ ನಾಡ್ಯೂಲ್ಗಳು ಮತ್ತು ಹೈಡ್ರೊಥರ್ಮಲ್ ಸಲ್ಫೈಡ್) ಆಳವಾದ ಸಾಗರ ಪರಿಶೋಧನೆಗಾಗಿ ಎಂಒಇಎಸ್, ಇಂಟರ್ನ್ಯಾಷನಲ್ ಸೀಬೆಡ್ ಅಥಾರಿಟಿ (ಐಎಸ್ಬಿಎ) ಯೊಂದಿಗೆ ಎರಡು ಒಪ್ಪಂದಗಳಿಗೆ ಸಹಿ ಹಾಕಿದೆ. ಈ ಕ್ಷೇತ್ರಗಳಲ್ಲಿನ ಬೆಳವಣಿಗೆಯ ಪ್ರಯೋಜನವನ್ನು ಪಡೆದುಕೊಳ್ಳಲು, ಭಾರತವು ಅಪ್ಸ್ಟ್ರೀಮ್ ಮತ್ತು ಡೌನ್ಸ್ಟ್ರೀಮ್ ಚಟುವಟಿಕೆಗಳಿಗೆ ಒಂದು ಸುಸ್ಥಿರ ನೀತಿಯನ್ನು ಅಭಿವೃದ್ಧಿಪಡಿಸಬೇಕು.

1.4 ಫೆಬ್ರವರಿ 2019 ರಲ್ಲಿ ನಿರೂಪಿಸಲ್ಪಟ್ಟ ಭಾರತ ಸರ್ಕಾರದ 2030 ರೊಳಗೆ ಸಾಧಿಸಬೇಕಾದ ಹೊಸ ಭಾರತದ ಧ್ಯೇಯವು, ನೀಲಿ ಆರ್ಥಿಕತೆಯನ್ನು ಬೆಳವಣಿಗೆಯ ಹತ್ತು ಪ್ರಮುಖ ಆಯಾಮಗಳಲ್ಲಿ ಒಂದೆಂದು ಎತ್ತಿತೋರಿಸಿದೆ. ಕರಾವಳಿ ಸಮುದಾಯಗಳ ಜೀವನವನ್ನು ಸುಧಾರಿಸಲು ಹಾಗೂ ಅಭಿವೃದ್ಧಿ ಮತ್ತು ಉದ್ಯೋಗವನ್ನು ವೇಗಗೊಳಿಸಲು ವಿವಿಧ ಕ್ಷೇತ್ರಗಳನ್ನು ಸಂಯೋಜಿಸುವ ಒಂದು ಸುಸಂಬದ್ಧ ನೀತಿಯ ಅಗತ್ಯವನ್ನು ಒತ್ತಿಹೇಳುವ ಈ ಧ್ಯೇಯದ ಆರನೇ ಆಯಾಮವಾಗಿ ನೀಲಿ ಆರ್ಥಿಕತೆಯನ್ನು ಉಲ್ಲೇಖಿಸಲಾಗಿದೆ. ಇತ್ತೀಚೆಗೆ, ಪ್ರಧಾನ ಮಂತ್ರಿಯವರು 2020 ರಲ್ಲಿ 74 ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ತಮ್ಮ ಭಾಷಣದಲ್ಲಿ, ಸಮಕಾಲೀನ ಸಂದರ್ಭದಲ್ಲಿ ನೆರೆಹೊರೆಯವರು ಎಂದರೆ ನಾವು ಅವರೊಂದಿಗೆ ಭೌತಿಕ ಗಡಿಯನ್ನು ಹಂಚಿಕೊಳ್ಳುವುದಷ್ಟೇ ಅಲ್ಲ, ನಾವು ಅವರೊಂದಿಗೆ ಸಂಬಂಧಗಳ ಸಾಮರಸ್ಯವನ್ನೂ ಹೊಂದಿರುತ್ತೇವೆ ಎಂದು ಒತ್ತಿ ಹೇಳಿದರು. ಭೂಮಿಯಲ್ಲಿನ ಸೇವೆಗಳಿಗೆ ಸಮನಾಗಿ ದ್ವೀಪಗಳಿಗೆ ಹೆಚ್ಚಿನ ವೇಗದ ಬ್ರಾಡ್ಬ್ಯಾಂಡ್ ಸಂಪರ್ಕವನ್ನು ಖಚಿತಪಡಿಸಲು, ನಮ್ಮ ದ್ವೀಪ ಪ್ರದೇಶಗಳನ್ನು ಸಬ್ಮರೈನ್ ಆಪ್ಟಿಕಲ್ ಫೈಬರ್ ಕೇಬಲ್ಗಳೊಂದಿಗೆ ಸಂಪರ್ಕಿಸುವ ಉದ್ದೇಶವೂ ಇದೆ. ಈ ಹಿನ್ನೆಲೆಯಲ್ಲಿ ಭಾರತವು ಆಫ್ರಿಕಾದ ಪೂರ್ವ ಕರಾವಳಿಯಿಂದ ಪಶ್ಚಿಮ ಪೆಸಿಫಿಕ್ ಮಹಾಸಾಗರದವರೆಗೆ ಹರಡುವ ಒಂದು ಪ್ರಮುಖ ಆರ್ಥಿಕ ಮತ್ತು ಕಾರ್ಯತಂತ್ರದ ಆಕ್ಸಿಸ್ ಅನ್ನು ಒಪ್ಪಿಕೊಳ್ಳಬೇಕು, ಅದನ್ನು ಸೀಶೆಲ್ಸ್-ಸಿಂಗಾಪುರ್-ಸಮೋವಾ (ಎಸ್ಎಸ್ಎಸ್) ಆಕ್ಸಿಸ್ ಎಂದು ಕರೆಯಬಹುದು. ಈ ಆಕ್ಸಿಸ್ ಭಾರತಕ್ಕೆ ಒಂದು ದೃಢವಾದ ನೀಲಿ ಆರ್ಥಿಕತೆ ನೀತಿಯ ಆಧಾರವಾಗಬೇಕು.

1.5 ಭಾರತಕ್ಕೆ ವಿಶಿಷ್ಟ ಕಡಲತಡಿಯ ಸ್ಥಾನವಿದೆ. ಅದರ 7517 ಕಿಮೀ ಉದ್ದದ ಕರಾವಳಿಯು ಒಂಬತ್ತು ಕರಾವಳಿ ರಾಜ್ಯಗಳು ಮತ್ತು 1382 ದ್ವೀಪಗಳಿಗೆ ನೆಲೆಯಾಗಿದೆ. ದೇಶವು 12 ಪ್ರಮುಖ ಬಂದರುಗಳನ್ನು ಮತ್ತು 187 ಪ್ರಮುಖವಲ್ಲದ ಬಂದರುಗಳನ್ನು ಹೊಂದಿದೆ, ಭಾರತದ 95% ವ್ಯಾಪಾರವು ಸಮುದ್ರದ ಮೂಲಕ ಸಾಗಣೆಯಾಗುವುದರಿಂದ ಇವು ಪ್ರತಿವರ್ಷ ಸುಮಾರು 1400 ಮಿಲಿಯನ್ ಟನ್ ಸರಕುಗಳನ್ನು ನಿರ್ವಹಿಸುತ್ತವೆ. ಎರಡು ದಶಲಕ್ಷ ಚದರ ಕಿಲೋಮೀಟರ್ಗಳಷ್ಟು ಭಾರತದ ವಿಶೇಷ ಆರ್ಥಿಕ ವಲಯವು ಜೀವಂತ ಮತ್ತು ನಿರ್ಜೀವ ಸಂಪನ್ಮೂಲಗಳಿಂದ ಸಮೃದ್ಧವಾಗಿದೆ ಹಾಗೂ ಕಚ್ಚಾ ತೈಲ ಮತ್ತು ಮರುಪಡೆಯಬಹುದಾದ ನೈಸರ್ಗಿಕ ಅನಿಲದ ಗಮನಾರ್ಹ ಮರುಪಡೆಯಬಹುದಾದ ಸಂಪನ್ಮೂಲಗಳನ್ನು ಹೊಂದಿದೆ. ಕರಾವಳಿ ಆರ್ಥಿಕತೆಯು 4 ದಶಲಕ್ಷಕ್ಕೂ ಹೆಚ್ಚು ಮೀನುಗಾರರನ್ನು ಮತ್ತು ಇತರೆ ಕರಾವಳಿ ಸಮುದಾಯಗಳನ್ನು ಸಹ ಒಳಗೊಂಡಿದೆ. ಈ ವಿಶಾಲವಾದ ಕಡಲ ಹಿತಾಸಕ್ತಿಗಳೊಂದಿಗೆ, ಭಾರತದ ನೀಲಿ ಆರ್ಥಿಕತೆಯು ರಾಷ್ಟ್ರದ ಆರ್ಥಿಕ ಬೆಳವಣಿಗೆಯೊಂದಿಗೆ ಪ್ರಮುಖ ಸಂಬಂಧವನ್ನು ಹೊಂದಿದೆ.

1.6 ಇತ್ತೀಚಿನ ವರ್ಷಗಳಲ್ಲಿ, ಕಡಲ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಉಪಕ್ರಮಗಳು ಭಾರತದ ಕಡಲ ಹಿತಾಸಕ್ತಿಗಳು ಮತ್ತು ನಮ್ಮ ನೀಲಿ ಆರ್ಥಿಕತೆಯ ಬೆಳವಣಿಗೆಯನ್ನು ಬಲಪಡಿಸುವ ವೇಗವರ್ಧಕಗಳಾಗಿವೆ. ಕೊವಿಡ್-19 ರ ನಂತರದ ಜಾಗತಿಕ ಸನ್ನಿವೇಶದಲ್ಲಿ, ಭಾರತವು ಸಾಗರ ಸಂಪನ್ಮೂಲಗಳ ಸಮರ್ಥ ಮತ್ತು ಸುಸ್ಥಿರ ಬಳಕೆಯಿಂದ ಸಮುದ್ರ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆಯನ್ನು ಕಾಣುವ ಸಾಧ್ಯತೆಯಿದೆ.

1.7 ಭಾರತವು ಪರಿಸರವನ್ನು ಕಾಪಾಡಿಕೊಂಡು ಮತ್ತು ಯುಎನ್ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಅನುಗುಣವಾಗಿ, ಸಾಗರ ಸಂಪನ್ಮೂಲಗಳ ಸಮರ್ಥ ಮತ್ತು ಸುಸ್ಥಿರ ಬಳಕೆಗಾಗಿ ಶ್ರಮಿಸಬೇಕು ಹಾಗೂ ಉದ್ಯೋಗ ಮತ್ತು ಒಟ್ಟು ಮೌಲ್ಯವರ್ಧನೆಯನ್ನು ವೇಗಗೊಳಿಸುವ ಉದ್ದೇಶದಿಂದ ಸಾಗರ ಸಂಬಂಧಿತ ಸಾಮರ್ಥ್ಯಗಳು ಮತ್ತು ಕೌಶಲ್ಯಗಳನ್ನು ಸಂಯೋಜಿಸಲು ಮತ್ತು ವರ್ಧಿಸಲು ಪ್ರಯತ್ನಿಸಬೇಕು.

1.8 ಭಾರತದ ನೀಲಿ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಲು ಪಾರದರ್ಶಕ ನೀತಿ ಚೌಕಟ್ಟನ್ನು ಆಧರಿಸಿದ ಸ್ಪಷ್ಟ ಕಾರ್ಯಸೂಚಿಯೊಂದನ್ನು ರೂಪಿಸಬೇಕಾಗಿದೆ. ಈ ನೀತಿ ಚೌಕಟ್ಟಿನ ಉದ್ದೇಶವೆಂದರೆ ಈ ಹೊಸ ಡೊಮೇನ್ನಲ್ಲಿ ಸುಸ್ಥಿರ ಮತ್ತು ಅಂತರ್ಗತ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ದೇಶದ ಜಿಡಿಪಿಯನ್ನು ಹೆಚ್ಚಿಸುವುದು ಹಾಗೂ ಭಾರತದ ಅಭಿವೃದ್ಧಿ ಕಾರ್ಯಸೂಚಿಯನ್ನು ರಾಷ್ಟ್ರೀಯ ಭದ್ರತಾ ಗುರಿಗಳು ಮತ್ತು ಅಂತರರಾಷ್ಟ್ರೀಯ ಬದ್ಧತೆಗಳೊಂದಿಗೆ ಜೋಡಿಸುವುದು.

## 2. ಮುನ್ನಡೆ - ಭಾರತದ ನೀಲಿ ಆರ್ಥಿಕತೆಗಾಗಿ ಕರಡು ನೀತಿಯ ಚೌಕಟ್ಟು

### ಪರಿಚಯ

2.1 ಭಾರತಕ್ಕೆ ವಿಶಿಷ್ಟ ಕಡಲತಡಿಯ ಸ್ಥಾನವಿದೆ. ಅದರ 7517 ಕಿಮೀ ಉದ್ದದ ಕರಾವಳಿಯು ಒಂಬತ್ತು ಕರಾವಳಿ ರಾಜ್ಯಗಳು ಮತ್ತು 1382 ದ್ವೀಪಗಳಿಗೆ ನೆಲೆಯಾಗಿದೆ. ದೇಶವು 12 ಪ್ರಮುಖ ಬಂದರುಗಳು ಮತ್ತು 187 ಪ್ರಮುಖವಲ್ಲದ ಬಂದರುಗಳನ್ನು ಹೊಂದಿದೆ, ಇದು 2019 ರಲ್ಲಿ ಸುಮಾರು 633.87 ಮಿಲಿಯನ್ ಟನ್ ಸರಕುಗಳನ್ನು ನಿರ್ವಹಿಸಿದೆ. ಪ್ರಮಾಣದಲ್ಲಿ ಭಾರತದ 95% ವ್ಯಾಪಾರವು ಸಮುದ್ರದ ಮೂಲಕ ಸಾಗಣೆಯಾಗುತ್ತದೆ. ಎರಡು ದಶಲಕ್ಷ ಚದರ ಕಿಲೋಮೀಟರ್‌ಗಳಷ್ಟು ಭಾರತದ ವಿಶೇಷ ಆರ್ಥಿಕ ವಲಯವು ಜೀವಂತ ಮತ್ತು ನಿರ್ಜೀವ ಸಂಪನ್ಮೂಲಗಳಿಂದ ಸಮೃದ್ಧವಾಗಿದೆ ಹಾಗೂ ಕಚ್ಚಾ ತೈಲ ಮತ್ತು ಮರುಪಡೆಯಬಹುದಾದ ನೈಸರ್ಗಿಕ ಅನಿಲದ ಗಮನಾರ್ಹ ಮರುಪಡೆಯಬಹುದಾದ ಸಂಪನ್ಮೂಲಗಳನ್ನು ಹೊಂದಿದೆ. ಇದು ಕರಾವಳಿ ಉತ್ಪಾದನೆ ಮತ್ತು ಸೇವೆಗಳಲ್ಲಿ, ವ್ಯಾಪಾರದಲ್ಲಿ, ಸಾಗಾಣೆಯಲ್ಲಿ, ಆಳ ಸಮುದ್ರದ ಖನಿಜಗಳು, ಜಲಚರ ಸಾಕಣೆ ಮತ್ತು ಮೀನುಗಾರಿಕೆ ಹಾಗೂ ಸಮುದ್ರ-ಸಂಬಂಧಿತ ತಂತ್ರಜ್ಞಾನಗಳಲ್ಲಿ ಮೌಲ್ಯವರ್ಧನೆಯನ್ನು ಹೆಚ್ಚಿಸುತ್ತದೆ. ಕರಾವಳಿ ಆರ್ಥಿಕತೆಯು 40 ಲಕ್ಷಕ್ಕೂ ಹೆಚ್ಚು ಮೀನುಗಾರರನ್ನು ಮತ್ತು ಕರಾವಳಿ ಸಮುದಾಯಗಳ ಇತರ ಗಮನಾರ್ಹ ಜನರನ್ನು ಸಹ ಹೊಂದಿದೆ.

2.2 ಆದ್ದರಿಂದ ಭಾರತದ ಈ ವಿಶಾಲ ಕಡಲತಡಿಯ ಹಿತಾಸಕ್ತಿಗಳು ರಾಷ್ಟ್ರದ ಆರ್ಥಿಕ ಬೆಳವಣಿಗೆ ಮತ್ತು ರಾಷ್ಟ್ರೀಯ ಭದ್ರತೆಯೊಂದಿಗೆ ಪ್ರಮುಖ ಸಂಬಂಧವನ್ನು ಹೊಂದಿವೆ. ಭಾರತದ ನೀಲಿ ಆರ್ಥಿಕತೆಯು ರಾಷ್ಟ್ರೀಯ ಆರ್ಥಿಕತೆಯ ಒಂದು ಉಪವಿಭಾಗವಾಗಿದ್ದು, ಇದು ಭಾರತದ ಕಾನೂನು ವ್ಯಾಪ್ತಿಯಲ್ಲಿರುವ ಸಾಗರ ಸಂಪನ್ಮೂಲಗಳು ಹಾಗೂ ಸಮುದ್ರ, ಕಡಲತಡಿ ಮತ್ತು ಕಡಲತೀರದ ಕರಾವಳಿ ವಲಯಗಳ ಮಾನವ-ನಿರ್ಮಿತ ಆರ್ಥಿಕ ಮೂಲಸೌಕರ್ಯಗಳ ಸಂಪೂರ್ಣ ವ್ಯವಸ್ಥೆಯನ್ನು ಒಳಗೊಂಡಿದೆ, ಹಾಗೂ ಇದು ಸರಕು ಮತ್ತು ಸೇವೆಗಳ ಉತ್ಪಾದನೆಗೆ ಸಹಾಯ ಮಾಡುತ್ತದೆ ಮತ್ತು ಆರ್ಥಿಕ ಬೆಳವಣಿಗೆ, ಪರಿಸರ ಸುಸ್ಥಿರತೆ ಮತ್ತು ರಾಷ್ಟ್ರೀಯ ಭದ್ರತೆಯೊಂದಿಗೆ ಸ್ಪಷ್ಟ ಸಂಪರ್ಕವನ್ನು ಹೊಂದಿದೆ.

ಭಾರತದ ನೀಲಿ ಆರ್ಥಿಕತೆಯ ಪ್ರಯೋಜನಗಳನ್ನು ಪಡೆಯುವ ಸಲುವಾಗಿ, ವಿವರವಾದ ಉಪ-ಗುಂಪು ವರದಿಗಳಲ್ಲಿ ನೀಡಲಾದ ಪ್ರಮುಖ ಒಳಹರಿವುಗಳನ್ನು ವಿಶ್ಲೇಷಿಸಿದ ನಂತರ ಈ ಕೆಳಗಿನ ಕರಡು ನೀತಿ ಚೌಕಟ್ಟನ್ನು ಪ್ರಸ್ತಾಪಿಸಲಾಗಿದೆ.

### ಜಾಗತಿಕ ಸ್ಥಿತಿ

2.3 ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾಗುವ ಅಪಾಯಗಳ ಜೊತೆಗೆ ಭವಿಷ್ಯದ ಬೆಳವಣಿಗೆ ಮತ್ತು ಸಮೃದ್ಧಿಯ ಅಗತ್ಯಗಳನ್ನು ಪ್ರತಿಬಿಂಬಿಸಲು ಯುನೈಟೆಡ್ ನೇಶನ್ಸ್ ಯೂನಿವರ್ಸಿಟಿಯಲ್ಲಿ (ಯುಎನ್‌ಯು) ಪ್ರೊಫೆಸರ್ ಗುಂಟರ್ ಪೌಲಿ ಅವರು 1994 ರಲ್ಲಿ ನೀಲಿ ಆರ್ಥಿಕತೆಯ ಆರ್ಥಿಕ ತತ್ವಶಾಸ್ತ್ರವನ್ನು ಮೊದಲು ಪರಿಚಯಿಸಿದರು. ಅದರ ನಂತರ, 2012 ರಲ್ಲಿ ನಡೆದ ಮೂರನೇ ಭೂ ಶೃಂಗಸಭೆ ಸಮಾವೇಶ - ರಿಯೊ+20 ರ ನಂತರ ನೀಲಿ ಆರ್ಥಿಕತೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಈ ಸಮ್ಮೇಳನದಲ್ಲಿ ಹಸಿರು ಆರ್ಥಿಕತೆಯ ಪರಿಕಲ್ಪನೆಯನ್ನು ನೀಲಿ ಆರ್ಥಿಕತೆಗೆ ವಿಸ್ತರಿಸುವ ಬಗ್ಗೆ ಗಮನ ಹರಿಸಲಾಯಿತು. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ 14, ಜಾಗತಿಕ ಆಡಳಿತ ಮತ್ತು ಸಾಗರ ಸಂಪನ್ಮೂಲಗಳ ಬಳಕೆಗೆ ಮಾರ್ಗದರ್ಶಿ ಸೂತ್ರವಾಗಿ “ಸಾಗರಗಳು, ಸಮುದ್ರಗಳು ಮತ್ತು ಸಮುದ್ರ ಸಂಪನ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಂರಕ್ಷಿಸಲು ಮತ್ತು ಸುಸ್ಥಿರವಾಗಿ ಬಳಸಲು” ಪ್ರಯತ್ನಿಸಿತು. ಹಲವಾರು ಸದಸ್ಯ ರಾಷ್ಟ್ರಗಳು ನೀಲಿ ಆರ್ಥಿಕತೆಯ ತಮ್ಮದೇ ಆದ ವ್ಯಾಖ್ಯಾನಗಳು ಮತ್ತು ಮಾದರಿಗಳನ್ನು ರೂಪಿಸಿವೆ.

2.4 ನೀಲಿ ಆರ್ಥಿಕತೆಯನ್ನು ಸದುಪಯೋಗಪಡಿಸಿಕೊಳ್ಳಲು ಪ್ರಪಂಚದಾದ್ಯಂತ ವಿವಿಧ ರಾಷ್ಟ್ರೀಯ ಮತ್ತು ಜಾಗತಿಕ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆಸ್ಟ್ರೇಲಿಯಾ, ಬ್ರೆಜಿಲ್, ಯುಕೆ, ಯುಎಸ್, ರಷ್ಯಾ ಮತ್ತು ನಾರ್ವೆಯಂತಹ ದೇಶಗಳು ಅಳೆಯಬಹುದಾದ ಫಲಿತಾಂಶಗಳು ಮತ್ತು ಬಜೆಟ್ ನಿಬಂಧನೆಗಳೊಂದಿಗೆ ಮೀಸಲಾದ ರಾಷ್ಟ್ರೀಯ ಸಾಗರ ನೀತಿಗಳನ್ನು ಅಭಿವೃದ್ಧಿಪಡಿಸಿವೆ. ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ದೇಶಗಳು ನೀಲಿ ಆರ್ಥಿಕತೆಯ ಗುರಿಗಳ ಪ್ರಗತಿ ಮತ್ತು ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಫೆಡರಲ್ ಮತ್ತು ರಾಜ್ಯ ಮಟ್ಟದಲ್ಲಿ ಶಾಸನಗಳನ್ನು ಜಾರಿಗೆ ತಂದಿವೆ ಹಾಗೂ ಶ್ರೇಣಿ-ವ್ಯವಸ್ಥೆಯ ಸಂಸ್ಥೆಗಳನ್ನು ಸ್ಥಾಪಿಸಿವೆ.

2.5 ಭಾರತವು 1981 ರಲ್ಲಿ ಸಾಗರ ಅಭಿವೃದ್ಧಿ ಇಲಾಖೆಯನ್ನು ರಚಿಸಿದ ವಿಶ್ವದಲ್ಲೇ ಮೊದಲನೆಯ ದೇಶವಾಗಿದೆ. ಮೂರು ದಶಕಗಳಿಗಿಂತಲೂ ಹೆಚ್ಚಿನ ಅನುಭವದ ಆಧಾರದ ಮೇಲೆ ಭಾರತವು, "ಡೀಪ್ ಓಷನ್ ಮಿಷನ್," "ಓಶನೊಗ್ರಫಿ ಫ್ರಮ್ ಸ್ಪೇಸ್" ಮತ್ತು "ಲಾಂಚಿಂಗ್ ಆಫ್ ದಿ ಡೇಟಾ ಬಾಯ್ಸ್" ಮುಂತಾದ ಹೊಸ ಕಾರ್ಯಕ್ರಮಗಳನ್ನು ಭಾರತದ ಕರಾವಳಿಯುದ್ದಕ್ಕೂ ಪ್ರಾರಂಭಿಸುವುದರೊಂದಿಗೆ ಬಹಳ ದೂರ ಸಾಗಿದೆ. ಎಸ್‌ಡಿಜಿ-14 ರ ಭಾಗವಾಗಿರುವ ಸಾಗರಗಳಲ್ಲಿ ಕಡಲಿನ ತ್ಯಾಜ್ಯ/ಪ್ಲಾಸ್ಟಿಕ್ ಅನ್ನು ಅಂದಾಜು ಮಾಡಲು ಮತ್ತು ಕಡಿಮೆ ಮಾಡಲು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು "ಕ್ಲೀನ್ ಸೀಸ್ ಪ್ರೋಗ್ರಾಂ" ನಲ್ಲಿ ತರುವಾಯದ ಭೂ ವಿಜ್ಞಾನ ಇಲಾಖೆಯು (ಎಂಒಇಎಸ್) ವಿಶ್ವಸಂಸ್ಥೆಯನ್ನು ಸೇರಿಕೊಂಡಿದೆ. ಹಿಂದೂ ಮಹಾಸಾಗರದ ಅಂತರರಾಷ್ಟ್ರೀಯ ನೀರಿನಲ್ಲಿ ಪಾಲಿಮೆಟಾಲಿಕ್ ನಾಡ್ಯೂಲ್‌ಗಳು ಮತ್ತು ಪಾಲಿಮೆಟಾಲಿಕ್ ಸಲ್ಫೈಡ್‌ಗಳಿಗೆ 75000 ಚದರ ಕಿಲೋಮೀಟರ್ ಪ್ರದೇಶದಲ್ಲಿ ಮತ್ತು 10000 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಭಾರತವು ಪರಿಶೋಧನೆಯ ವಿಶೇಷ ಹಕ್ಕುಗಳನ್ನು ಹೊಂದಿದೆ.

## *ಧ್ಯೇಯ*

2.6 ಫೆಬ್ರವರಿ 2019 ರಲ್ಲಿ ನಿರೂಪಿಸಲ್ಪಟ್ಟ ಭಾರತ ಸರ್ಕಾರದ 2030 ರೊಳಗೆ ಸಾಧಿಸಬೇಕಾದ ಹೊಸ ಭಾರತದ ಧ್ಯೇಯವು, ನೀಲಿ ಆರ್ಥಿಕತೆಯನ್ನು ಆರ್ಥಿಕ ಬೆಳವಣಿಗೆಯ ಹತ್ತು ಪ್ರಮುಖ ಆಯಾಮಗಳಲ್ಲಿ ಒಂದೆಂದು ಎತ್ತಿತೋರಿಸಿದೆ. ಸುಸಂಬದ್ಧ ನೀತಿಯ ಅಗತ್ಯವನ್ನು ಒತ್ತಿಹೇಳುವ ಈ ಧ್ಯೇಯದ ಆರನೇ ಆಯಾಮವಾಗಿ ನೀಲಿ ಆರ್ಥಿಕತೆಯನ್ನು ಉಲ್ಲೇಖಿಸಲಾಗಿದೆ. ನೀಲಿ ಆರ್ಥಿಕತೆಯ ಕುರಿತಾದ ಹಿಂದಿನ ಕರಡು ನೀತಿಯನ್ನು 2015 ರಲ್ಲಿ ಭೂ ವಿಜ್ಞಾನ ಇಲಾಖೆಯು (ಎಂಒಇಎಸ್) ಪ್ರಾರಂಭಿಸಿತು, ಆದರೆ ಅದನ್ನು ಅಂತಿಮಗೊಳಿಸಲಾಗಲಿಲ್ಲ. ಈ ನೀತಿಯ ಚೌಕಟ್ಟನ್ನು ಆ ನೀತಿಯ ದಸ್ತಾವೇಜಿನಲ್ಲಿ ಸಂಯೋಜಿಸಲಾದ ಹಲವಾರು ವಿಚಾರಗಳ ಆಧಾರದಲ್ಲಿ ರಚಿಸಲಾಗಿದೆ.

2.7 ನೀಲಿ ಆರ್ಥಿಕತೆಯ ಸಾಮಾಜಿಕ-ಆರ್ಥಿಕ ಸಾಮರ್ಥ್ಯವನ್ನು ಬಳಸಿಕೊಳ್ಳುವ ಭಾರತದ ಕಾರ್ಯವಿಧಾನವು ಇದರ ಬಗ್ಗೆ ಗಮನಹರಿಸಬೇಕು: -

- ನೀಲಿ ಆರ್ಥಿಕತೆಯ ಚಟುವಟಿಕೆಗಳ ಸರಿಯಾದ ಮಾಪನ ಮತ್ತು ರಾಷ್ಟ್ರೀಯ ಆದಾಯಕ್ಕೆ ಅವುಗಳ ಕೊಡುಗೆಗಾಗಿ ಒಂದು ಚೌಕಟ್ಟು;
- ಸಾಗರ ಸಂಪನ್ಮೂಲಗಳ ವೈಜ್ಞಾನಿಕ ಮೌಲ್ಯಮಾಪನ ಮತ್ತು ಅವುಗಳ ಸುಸ್ಥಿರ ಬಳಕೆಯೊಂದಿಗೆ ಪ್ರಾದೇಶಿಕವಾಗಿ ಆಧಾರಿತ ಯೋಜನೆ
- ನೀಲಿ ಆರ್ಥಿಕತೆಯ ಸಾಮರ್ಥ್ಯವನ್ನು ಬಳಸಿಕೊಳ್ಳಲು ಹಾಗೂ ಜಿಡಿಪಿ ಮತ್ತು ಉದ್ಯೋಗ ಬೆಳವಣಿಗೆಯನ್ನು

ಉತ್ತಮಗೊಳಿಸಲು ಹಣಕಾಸು ಬಂಡವಾಳ, ಭೌತಿಕ ಬಂಡವಾಳ, ನೈಸರ್ಗಿಕ ಬಂಡವಾಳ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆ;

- ಕರಾವಳಿ ಪ್ರದೇಶಗಳಲ್ಲಿ ಮೀನುಗಾರರ ಕಲ್ಯಾಣ, ಸುರಕ್ಷತೆ ಮತ್ತು ಜೀವನೋಪಾಯವನ್ನು ಖಾತರಿಪಡಿಸುವುದು
- ಶೂನ್ಯ ತ್ಯಾಜ್ಯವನ್ನು ಖಚಿತಪಡಿಸಲು ನಾವೀನ್ಯತೆ, ಹೆಚ್ಚಿನ ಜನರಿಗೆ ಆರ್ಥಿಕ ಲಾಭಾಂಶವನ್ನು ನೀಡುವ ಕಡಿಮೆ ಇಂಗಾಲದ ತಂತ್ರಜ್ಞಾನಗಳು,
- ಸಾಗರ ಭದ್ರತಾ ಕ್ರಮಗಳು ಮತ್ತು ಸಮತೋಲಿತ ಅಂತರರಾಷ್ಟ್ರೀಯ ತೊಡಗಿಸಿಕೊಳ್ಳುವಿಕೆಗಳು.

## *ಶೀರ್ಷಿಕೆ ಮತ್ತು ಜಾರಿಗೊಳಿಸುವಿಕೆ*

2.8 ಈ ಕರಡು ನೀತಿಯನ್ನು "ಭಾರತದ ನೀಲಿ ಆರ್ಥಿಕತೆಗಾಗಿ ರಾಷ್ಟ್ರೀಯ ನೀತಿ - 2020" ಎಂದು ಕರೆಯಬಹುದು. ಈ ಕರಡು ನೀತಿಯನ್ನು ಸೂಕ್ತವಾದಾಗಲೆಲ್ಲಾ ಭಾರತ ಸರ್ಕಾರವು ಮೌಲ್ಯಮಾಪನ ಮಾಡಬೇಕು, ವಿಶ್ಲೇಷಿಸಬೇಕು, ಪರಿಶೀಲಿಸಬೇಕು ಮತ್ತು ಬದಲಾಯಿಸಬೇಕು. ಈ ಅಧ್ಯಾಯದ ಉದ್ದೇಶಕ್ಕಾಗಿ, ಇದನ್ನು "ನೀತಿ" ಎಂದು ಉಲ್ಲೇಖಿಸಲಾಗುತ್ತದೆ. ಈ ನೀತಿಯ ನಿರ್ವಹಣೆಗಾಗಿ ಭೂ ವಿಜ್ಞಾನ ಇಲಾಖೆಯು ನೋಡಲ್ ಇಲಾಖೆಯಾಗಿರುತ್ತದೆ.

## *ಉದ್ದೇಶಗಳು ಮತ್ತು ಕಾರ್ಯವಿಧಾನ*

2.9 ಅನುಮೋದನೆಯಾದ ಅಂತಿಮ ನೀತಿಯು ಭಾರತದ ನೀಲಿ ಆರ್ಥಿಕತೆಗೆ ಸಂಬಂಧಿಸಿದ ವಿಷಯಗಳಿಗೆ ಪ್ರಾಥಮಿಕ ನೀತಿ ಮತ್ತು ನಿರ್ಧಾರ-ತೆಗೆದುಕೊಳ್ಳುವ ದಾಖಲೆಯಾಗಿರುತ್ತದೆ.

ನೀತಿಯ ಅಗತ್ಯ ಅಂಶಗಳು ಈ ಕೆಳಗಿನ ವಿಷಯಗಳನ್ನು ಅದರ ವ್ಯಾಪ್ತಿಯಲ್ಲಿ ಒಳಗೊಂಡಿರುತ್ತವೆ.

## *(ಎ) ನೀಲಿ ಆರ್ಥಿಕತೆಗಾಗಿ ರಾಷ್ಟ್ರೀಯ ಲೆಕ್ಕ ಪತ್ರ ಚೌಕಟ್ಟು*

2.10 ನೀಲಿ ಆರ್ಥಿಕತೆಗೆ ಸಂಬಂಧಿಸಿದ ವಿಶ್ವಾಸಾರ್ಹ ಡೇಟಾವನ್ನು ಉತ್ಪಾದಿಸಲು ಮತ್ತು ಸಂಗ್ರಹಿಸಲು ಹೊಸ ದೃಢವಾದ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಸಂಯೋಜನೆ, ಬೆಳವಣಿಗೆ ಮತ್ತು ಪಥವನ್ನು ನಿರ್ಣಯಿಸಲು ನೀಲಿ ಆರ್ಥಿಕತೆಯ ನಿರ್ದಿಷ್ಟ ವಲಯಗಳ ಆವರ್ತಕ ಅಧ್ಯಯನಗಳನ್ನು ಕೈಗೊಳ್ಳಲಾಗುವುದು.

2.11 ನೀಲಿ ಆರ್ಥಿಕತೆಗೆ ಸಂಬಂಧಿಸಿದ ಕ್ಷೇತ್ರಗಳು ಮತ್ತು ಉಪ ವಲಯಗಳನ್ನು ಗುರುತಿಸಲು ಮತ್ತು ಅಳತೆಗಾಗಿ ಒಂದು ಚೌಕಟ್ಟನ್ನು ರೂಪಿಸಲು ಒಂದು ತಜ್ಞರ ಗುಂಪನ್ನು ರಚಿಸಲಾಗುವುದು. ಅಸ್ತಿತ್ವದಲ್ಲಿರುವ ಕೈಗಾರಿಕಾ ವರ್ಗೀಕರಣ ಪ್ರೋಟೋಕಾಲ್‌ಗಳು ಮತ್ತು ತೂಕ ನಿಯೋಜನೆಯನ್ನು ಈ ನಿಟ್ಟಿನಲ್ಲಿ ಪುನಃ ಪರಿಗಣಿಸಲಾಗುತ್ತದೆ. ನೀಲಿ ಆರ್ಥಿಕತೆಯ ಮಾಪನ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ವೈಜ್ಞಾನಿಕ ಸಾಧನಗಳು ಮತ್ತು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಪ್ರಮುಖ ದೇಶಗಳು/ಸಂಸ್ಥೆಗಳೊಂದಿಗೆ ವೈಜ್ಞಾನಿಕ ಸಹಯೋಗವನ್ನು ನಡೆಸಲಾಗುವುದು.

## *(ಬಿ) ಪರಿಸರಾತ್ಮಕ ಸುಸ್ಥಿರ ರಾಷ್ಟ್ರೀಯ ಕರಾವಳಿ ಕಡಲಿನ ಪ್ರಾದೇಶಿಕ ಯೋಜನೆ ಚೌಕಟ್ಟು*

2.12 ಭಾರತದ ಕರಾವಳಿ ವಲಯಗಳ ವೈಜ್ಞಾನಿಕ ಮತ್ತು ನಿಖರವಾದ ಮ್ಯಾಪಿಂಗ್ ಸಮಗ್ರ ಕರಾವಳಿ ಮತ್ತು ಸಮುದ್ರದ ಪ್ರಾದೇಶಿಕ ಯೋಜನೆಗಳಿಗೆ ಕಾರಣವಾಗುತ್ತದೆ. ಭಾರತವು ಯುನೆಸ್ಕೋ-ಐಒಸಿ ಮಾರ್ಗದರ್ಶಿಯನ್ನು ಅಳವಡಿಸಿಕೊಳ್ಳುತ್ತದೆ ಮತ್ತು ಹೊಂದಿಕೊಳ್ಳುತ್ತದೆ. ನಮ್ಮ ರಾಷ್ಟ್ರೀಯ ಮತ್ತು ಸ್ಥಳೀಯ ಅಗತ್ಯಗಳಿಗೆ ಅಗತ್ಯವಾದ ಮಾರ್ಪಾಡುಗಳನ್ನು ಸೂಚಿಸಲು ಒಂದು ತಜ್ಞರ ಗುಂಪನ್ನು ರಚಿಸಲಾಗುವುದು. ಇದಕ್ಕೆ ಭೂ ವಿಜ್ಞಾನ ಮತ್ತು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಗಳು ಹಾಗೂ ಇತರ ಸಂಬಂಧಿತ ಇಲಾಖೆಗಳು/ಸಂಸ್ಥೆಗಳ ನಡುವೆ ನಿಕಟ ಸಮನ್ವಯದ ಅಗತ್ಯವಿರುತ್ತದೆ. ಭಾರತದ ದ್ವೀಪ ಪ್ರದೇಶಗಳನ್ನು ಒಳಗೊಂಡಂತೆ ಭಾರತದ ಇಇಜೆಡ್‌ನ ನೀಲಿ ಆರ್ಥಿಕತೆಯ ಭವಿಷ್ಯದ ಅಭಿವೃದ್ಧಿಗೆ ಹಾಗೂ ದ್ವೀಪ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ಯೋಜಿಸಲು ಮತ್ತು ಬ್ಲ್ಯೂ ಫ್ಲ್ಯಾಗ್ ಬೀಚ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಸಿಎಮ್‌ಎಸ್‌ಪಿ ಆಧಾರವಾಗಿರುತ್ತದೆ. ಸಿಎಮ್‌ಎಸ್‌ಪಿ ವ್ಯಾಪಕವಾದ ಬಳಕೆದಾರರಿಗೆ ದತ್ತಾಂಶದ ಲಭ್ಯತೆಯನ್ನು ಆಧರಿಸಿರುವುದರಿಂದ, ದತ್ತಾಂಶ ಸುರಕ್ಷತೆ, ಪಾರದರ್ಶಕತೆ ಮತ್ತು ಪ್ರವೇಶಾವಕಾಶದ ಹಿತಾಸಕ್ತಿಗಳನ್ನು ಸಮತೋಲನಗೊಳಿಸುವ ಒಂದು ಹೊಸ ರಾಷ್ಟ್ರೀಯ ನಕ್ಷೆ ಮತ್ತು ದತ್ತಾಂಶ ನೀತಿಯನ್ನು ರೂಪಿಸಲಾಗುವುದು.

2.13 ವಿಶೇಷವಾಗಿ ಪ್ಲಾಸ್ಟಿಕ್ ಮತ್ತು ಮೈಕ್ರೋ ಪ್ಲಾಸ್ಟಿಕ್‌ನಿಂದ ಹೆಚ್ಚುತ್ತಿರುವ ಸಮುದ್ರ ಮಾಲಿನ್ಯದ ಅಪಾಯವನ್ನು ಪರಿಸರ, ಭೂ ವಿಜ್ಞಾನ ಮತ್ತು ನಗರಾಭಿವೃದ್ಧಿ ಇಲಾಖೆ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಮತ್ತು ಕರಾವಳಿ ಸಮುದಾಯಗಳನ್ನು ಒಳಗೊಂಡ ಒಂದು ದೃಢವಾದ ಪ್ಲಾಸ್ಟಿಕ್ ನಿವಾರಣೆ ಮತ್ತು ರಾಷ್ಟ್ರೀಯ ಸಮುದ್ರ ತ್ಯಾಜ್ಯ-ನಿರ್ವಹಣೆ ನೀತಿಯಿಂದ ಸಮಯಕ್ಕೆ ಸರಿಯಾಗಿ ಪರಿಹರಿಸಲಾಗುವುದು. ಪರಿಸರ ಹಾಗೂ ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯು ಪ್ರಸ್ತಾಪಿಸುತ್ತಿರುವ ರಾಷ್ಟ್ರೀಯ ಕರಾವಳಿ ಮಿಷನ್ ಅನ್ನು ನೀಲಿ ಆರ್ಥಿಕತೆ ಚಟುವಟಿಕೆಗಳೊಂದಿಗೆ ಸಂಯೋಜಿಸಲಾಗುವುದು. ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ-14) ಅನುಷ್ಠಾನವು ನೀಲಿ ಆರ್ಥಿಕತೆ ನೀತಿಯ ಒಂದು ಭಾಗವಾಗಲಿದೆ.

## *(ಸಿ) ಸಮುದ್ರ ಮೀನುಗಾರಿಕೆ, ಜಲಚರ ಸಾಕಣೆ ಮತ್ತು ಮೀನು ಸಂಸ್ಕರಣೆಯನ್ನು ಅಭಿವೃದ್ಧಿಪಡಿಸುವ ಧ್ಯೇಯ.*

2.14 ಕಳೆದ ಐದು ವರ್ಷಗಳಲ್ಲಿ, ಮೀನುಗಾರಿಕೆ ಕ್ಷೇತ್ರವು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಅತ್ಯಧಿಕ ಬೆಳವಣಿಗೆಯನ್ನು ತೋರಿಸಿದೆ. ಮೀನುಗಾರಿಕೆ ನಿರ್ವಹಣೆಗೆ ಪರಿಸರ-ವ್ಯವಸ್ಥೆಯ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಜಲಚರ ಸಾಕಣೆ, ಕೇಜ್ ಕಲ್ಚರ್, ಕಡಲಕಳೆ ಮತ್ತು ಪಾಚಿ ಕೊಯ್ಲು ಹಾಗೂ ಸುಸ್ಥಿರ ಸಮುದ್ರ-ಜೀವಿಗಳ ಹಿಡಿಯುವಿಕೆಯನ್ನು ಉತ್ತೇಜಿಸುವ ಮೂಲಕ ನೀಲಿ ಕ್ರಾಂತಿಯನ್ನು ಇನ್ನಷ್ಟು ವಿಸ್ತರಿಸಲಾಗುವುದು. ತಂತ್ರಜ್ಞಾನ, ಟೆಲಿ-ಕಮ್ಯುನಿಕೇಶನ್, ಡಿಜಿಟಲ್ ಮತ್ತು ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್‌ಗಳ ವ್ಯಾಪಕ ಬಳಕೆಯು ಮೀನುಗಾರಿಕೆ ಮತ್ತು ಸಾಗರ ನಿರ್ವಹಣೆಯ ಎಲ್ಲಾ ವಿಷಯಗಳಲ್ಲಿಯೂ ಪ್ರಚಲಿತವಾಗಲಿದೆ. ಆದಾಗ್ಯೂ, ಮುಂಬರುವ ವರ್ಷಗಳಲ್ಲಿ ಮೀನುಗಾರಿಕೆ ಸಂಪನ್ಮೂಲಗಳ ಸುಸ್ಥಿರ ಬಳಕೆಗೆ ಒತ್ತು ನೀಡಲಾಗುವುದು.

2.15 ಸಂಕೀರ್ಣ ಸಂವಹನ ಸಂಪರ್ಕ, ಆರ್ಥಿಕ ಸೇರ್ಪಡೆ, ನವೀಕರಿಸಿದ ಕೊಯ್ಲು-ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಮಧ್ಯಸ್ಥಿಕೆಗಳೊಂದಿಗೆ ಮೀನುಗಾರರ ಜೀವನ ಮತ್ತು ಜೀವನೋಪಾಯವನ್ನು ರಕ್ಷಿಸಲಾಗುವುದು ಮತ್ತು ಹೆಚ್ಚಿಸಲಾಗುವುದು. ಸಮಗ್ರ ರಾಷ್ಟ್ರೀಯ ಮಾರಿಕಲ್ಚರ್ ನೀತಿಯನ್ನು ಜಾರಿಗೊಳಿಸುವ ಮೂಲಕ ಪಾಚಿಗಳ ಉತ್ಪಾದನೆಯಂತಹ ಮಾರಿಕಲ್ಚರ್ ಅನ್ನು ಉತ್ತೇಜಿಸಲಾಗುವುದು. ಮೀನುಗಾರಿಕೆ ಸಂಪನ್ಮೂಲಗಳ ಆಹಾರೇತರ ವಲಯವನ್ನು ಕೇಂದ್ರೀಕರಿಸಿ ಸಮುದ್ರ ಜೈವಿಕ-ತಂತ್ರಜ್ಞಾನದ

ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುವುದು. ವಾಣಿಜ್ಯೀಕರಣಕ್ಕೆ ಅಪಾರ ಸಾಮರ್ಥ್ಯವನ್ನು ಸಂಗ್ರಹಿಸಲು ಹೊಸ ತಂತ್ರಜ್ಞಾನಗಳ ಪೀಳಿಗೆಗೆ ಆಹಾರೇತರ ವಲಯವನ್ನು ಕೇಂದ್ರೀಕರಿಸುವ ರಾಷ್ಟ್ರೀಯ ಮಟ್ಟದ “ಇನ್‌ಸ್ಟಿಟ್ಯೂಟ್ ಫಾರ್ ಮೆರೈನ್ ಬಯೋಟೆಕ್ನಾಲಜಿ”ಯ ಸ್ಥಾಪನೆಯನ್ನು ತ್ವರಿತಗೊಳಿಸಲಾಗುವುದು. ಸಮುದ್ರ ಮೀನುಗಾರಿಕೆಯ ಸಮಗ್ರ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಹಾಗೂ ಜಲಚರಗಳ ಕಾಯಿಲೆಯ ನಿರ್ವಹಣೆ ಮತ್ತು ಸಾಗರ ಆರೋಗ್ಯಕ್ಕಾಗಿ ಅಗತ್ಯವಿದ್ದರೆ ಶಾಸನ ಸೇರಿದಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

## *(ಡಿ) ನೀಲಿ ಆರ್ಥಿಕತೆಗೆ ಸಂಬಂಧಿಸಿದ ದೇಶೀಯ ಉತ್ಪಾದನೆ, ಹೊರಹೊಮ್ಮುತ್ತಿರುವ ಕೈಗಾರಿಕೆಗಳು, ವ್ಯಾಪಾರ, ಪ್ರವಾಸೋದ್ಯಮ, ತಂತ್ರಜ್ಞಾನ, ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸುವ ಧ್ಯೇಯ*

2.16 ಸುಧಾರಿತ ಲಾಜಿಸ್ಟಿಕ್ಸ್, ಮೀನುಗಾರಿಕೆ, ಹಡಗು ನಿರ್ಮಾಣ ಹಾಗೂ ಕರಾವಳಿ ಮತ್ತು ಕ್ರೂಸ್ ಪ್ರವಾಸೋದ್ಯಮ (ದ್ವೀಪ ಪ್ರವಾಸೋದ್ಯಮ ಮತ್ತು ಅಭಿವೃದ್ಧಿ ಸೇರಿದಂತೆ) ಹೊಂದಿರುವ ಬಂದರುಗಳ ಅಭಿವೃದ್ಧಿಯ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗಕ್ಕೆ ಅಪಾರ ಸಾಮರ್ಥ್ಯವಿದೆ. ಸೂಕ್ತವಾದ ಮಾದರಿ ಉಪಕ್ರಮಗಳ ಮೂಲಕ ಮತ್ತು ಹೊಸ ವ್ಯವಹಾರಗಳಲ್ಲಿ ಹೂಡಿಕೆ ಮಾಡಲು ಖಾಸಗಿ ವಲಯವನ್ನು ಪ್ರೋತ್ಸಾಹಿಸುವ ಮೂಲಕ ಈ ಎಲ್ಲದಕ್ಕೂ ಒಂದು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವರ್ಧನೆಯನ್ನು ನೀಡಲಾಗುವುದು. ಹೊಸ ಮತ್ತು ಹೊರಹೊಮ್ಮುತ್ತಿರುವ ಕ್ಷೇತ್ರಗಳಾದ ಸಾಗರ ಜೈವಿಕ-ತಂತ್ರಜ್ಞಾನ, ಆಳ ಸಮುದ್ರ ಗಣಿಗಾರಿಕೆ ಮತ್ತು ಸಾಗರ ಶಕ್ತಿಗೆ ಉತ್ತೇಜನ ನೀಡಲಾಗುವುದು. ಈ ಹೊರಹೊಮ್ಮುತ್ತಿರುವ ವಲಯಗಳಿಗೆ ಹೆಚ್ಚು ಬಂಡವಾಳ ಅಗತ್ಯವಿರುವುದರಿಂದ ನೂತನ ಹಣಕಾಸು ಮತ್ತು ವ್ಯವಹಾರ ಮಾದರಿಗಳನ್ನು ಪರಿಶೋಧಿಸಲಾಗುವುದು.

2.17 ಆರ್&ಡಿ ಮತ್ತು ನಾವೀನ್ಯತೆಯು ಭಾರತದ ದಕ್ಷತೆಯ ಲಾಭ ಮತ್ತು ನಾಯಕತ್ವದ ಕೀಯನ್ನು ಹೊಂದಿದೆ, ಅದಕ್ಕಾಗಿ ಕರಾವಳಿ ರಾಜ್ಯಗಳಲ್ಲಿ ವೈಜ್ಞಾನಿಕ ಸಂಸ್ಥೆಗಳು ಮತ್ತು ಉದ್ಯಮದ ನಡುವೆ ಮುಂದಿನ ಮತ್ತು ಹಿಂದಿನ ಸಂಪರ್ಕವನ್ನು ಹೊಂದಿರುವ ಆರ್&ಡಿ ಹಬ್‌ಗಳನ್ನು ರಚಿಸಲಾಗುವುದು. ಉದ್ಯೋಗ ಸೃಷ್ಟಿ ಮತ್ತು ರಫ್ತು ಸಾಮರ್ಥ್ಯವನ್ನು ಗರಿಷ್ಠಗೊಳಿಸಲು ಬ್ಲೂ ಟ್ರೇಡ್ ಮತ್ತು ಬ್ಲೂ ಮ್ಯಾನ್ಯುಫ್ಯಾಕ್ಚರಿಂಗ್ ಅನ್ನು ಅನುಸರಿಸಲಾಗುವುದು, ಅದಕ್ಕಾಗಿ ಸೂಕ್ತವಾದ ಸ್ಕಿಲ್ಲಿಂಗ್ ಕೋರ್ಸ್‌ಗಳು ಮತ್ತು ಅನುಕೂಲಕರ ನಿಯಂತ್ರಕ ಕ್ರಮಗಳನ್ನು ರೂಪಿಸಲಾಗುವುದು. ಮೂಲಸೌಕರ್ಯ ಮತ್ತು ಪ್ರವೇಶಿಸುವ ಜನರ ಪ್ರಮಾಣವನ್ನು ಪರಿಸರ ವ್ಯವಸ್ಥೆಯ 'ಬೆಂಬಲ ಸಾಮರ್ಥ್ಯ'ಕ್ಕೆ ಸೀಮಿತಗೊಳಿಸಲು, ಪರಿಸರ ಸೂಕ್ಷ್ಮ ಪ್ರವಾಸಿ ಪ್ರದೇಶಗಳಲ್ಲಿ ಪರಿಸರ ಪ್ರಭಾವದ ಮೌಲ್ಯಮಾಪನ ಅಧ್ಯಯನಗಳನ್ನು ನಿಯತಕಾಲಿಕವಾಗಿ ನಡೆಸಲಾಗುವುದು

## *(ಇ) ಲಾಜಿಸ್ಟಿಕ್ಸ್, ಇನ್ಫ್ರಾಸ್ಟ್ರಕ್ಚರ್ ಮತ್ತು ಶಿಪ್ಪಿಂಗ್ (ಟ್ರಾನ್ಸ್‌ಶಿಪ್ಮೆಂಟ್ ಸೇರಿದಂತೆ) ಅಭಿವೃದ್ಧಿಪಡಿಸಲು ಒಂದು ಸಂಯೋಜಿತ ಯೋಜನೆ*

2.18 ಸಾಗರಮಾಲಾ ಕಾರ್ಯಕ್ರಮದಲ್ಲಿ ಈಗಾಗಲೇ ಪರಿಕಲ್ಪನೆ ಮಾಡಿರುವಂತೆ ಬಂದರು ನೇತೃತ್ವದ ಅಭಿವೃದ್ಧಿಗೆ ಪ್ರಮುಖವಾದ ಸಾಗರ ಸಮೂಹಗಳಿಗೆ ಹೆಚ್ಚುವರಿ ಗಮನ ಮತ್ತು ಧನ ಸಹಾಯದ ಮೂಲಕ ಪ್ರೋತ್ಸಾಹವನ್ನು ನೀಡಲಾಗುವುದು. ಭಾರತದಲ್ಲಿ ಹಡಗು

ನಿರ್ಮಾಣ ಉದ್ಯಮವನ್ನು 30 ವರ್ಷಗಳ ಯೋಜನೆಯೊಂದಿಗೆ ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತಕ್ಕೆ ಒತ್ತು ನೀಡುವ ಮೂಲಕ ಉತ್ತೇಜಿಸಲಾಗುವುದು ಮತ್ತು ಆಧುನೀಕರಿಸಲಾಗುವುದು.

2.19 ತೆರಿಗೆ ನಿಯಮಗಳ ಸಾಮರಸ್ಯವನ್ನು ಒಳಗೊಂಡಂತೆ ವ್ಯಾಪಾರ ಮಾಡುವುದನ್ನು ಸುಲಭಗೊಳಿಸಲು ಮತ್ತು ದಕ್ಷತೆಯನ್ನು ಸುಧಾರಿಸಲು ಲಾಜಿಸ್ಟಿಕ್ಸ್ ಮತ್ತು ಸಂಪರ್ಕವನ್ನು ಹೆಚ್ಚಿಸುವ ಸಲುವಾಗಿ ಒಂದು ಸಮಗ್ರ ಕಾರ್ಯವಿಧಾನವನ್ನು ಕೈಗೊಳ್ಳಲಾಗುತ್ತದೆ. ಲಾಜಿಸ್ಟಿಕ್ಸ್ ವೆಚ್ಚವನ್ನು ಕಡಿಮೆ ಮಾಡಲು ಮಲ್ಟಿ ಮೋಡಲ್ ನೆಟ್‌ವರ್ಕ್ ಮತ್ತು ಡಿಜಿಟಲ್ ಗ್ರಿಡ್‌ಗಾಗಿ ಒಂದು ನ್ಯಾಷನಲ್ ಮಾಸ್ಟರ್ ಪ್ಲ್ಯಾನ್ ಅನ್ನು ಪ್ರಾರಂಭಿಸಲಾಗುವುದು. ಕರಾವಳಿ ಮತ್ತು ದ್ವೀಪ ಪ್ರದೇಶಗಳಿಗೆ ದೂರಸಂಪರ್ಕ ಮತ್ತು ಡಿಜಿಟಲ್ ಮೂಲಸೌಕರ್ಯಗಳನ್ನು ಬಲಪಡಿಸಲಾಗುತ್ತದೆ. ಸಂಕೀರ್ಣ ಮತ್ತು ಕಾರ್ಯತಂತ್ರದ ಕಡಲ ಕ್ಷೇತ್ರದ ಸಮಗ್ರ ಯೋಜನೆಗಾಗಿ ರಾಷ್ಟ್ರೀಯ ಕಡಲ ನೀತಿಯನ್ನು ಸಹ ನಿರೂಪಿಸಲಾಗುವುದು.

## *(ಎಫ್) ಕರಾವಳಿ ಮತ್ತು ಆಳ-ಸಮುದ್ರ ಗಣಿಗಾರಿಕೆ, ಹೊಸ ಮತ್ತು ನವೀಕರಿಸಬಹುದಾದ ಕಡಲಾಚೆಯ ಇಂಧನ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ಒಂದು ಚೌಕಟ್ಟು*

2.20 ನವೀಕರಿಸಬಹುದಾದ ಇಂಧನ, ಹೈಡ್ರೋಕಾರ್ಬನ್, ಅಮೂಲ್ಯ ಖನಿಜಗಳು ಮತ್ತು ಲೋಹಗಳನ್ನು ಒದಗಿಸಲು ಸಾಗರಗಳು ಅಪಾರ ಸಾಮರ್ಥ್ಯವನ್ನು ಹೊಂದಿವೆ. ಇಇಜೆಡ್‌ನಲ್ಲಿ ಹೈಡ್ರೋಕಾರ್ಬನ್‌ಗಳ ಪರಿಶೋಧನೆಗಾಗಿ ಹಲವಾರು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಹಾಗೂ ಈ ನಿಟ್ಟಿನಲ್ಲಿ, ಅನುಮತಿ ನೀಡುವಿಕೆ, ದತ್ತಾಂಶ ಹಂಚಿಕೆ ಇತ್ಯಾದಿಗಳಿಗಾಗಿ ಅಂತರ-ಇಲಾಖೆಗಳ ಸಹಯೋಗದ ಅವಶ್ಯಕತೆಯಿದೆ. ಸಂಶೋಧನೆಗಳನ್ನು ನಡೆಸಲು ಮತ್ತು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಹಣಕಾಸಿನ ವಿನಿಯೋಗ ಮತ್ತು ಮಾನವ ಸಂಪನ್ಮೂಲಗಳ ನಿಯೋಜನೆಯೊಂದಿಗೆ ಹೂಡಿಕೆಗಳಿಗೆ ಆದ್ಯತೆ ನೀಡಲಾಗುವುದು. ದೇಶೀಯ ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ನಡುವೆ ವೈಜ್ಞಾನಿಕ ಸಹಯೋಗವನ್ನು ನಡೆಸಲಾಗುವುದು ಮತ್ತು ಬಲಪಡಿಸಲಾಗುವುದು. ಕಾರ್ಯಸಾಧ್ಯವಾದ ಠೇವಣಿಗಳನ್ನು ಅನ್ವೇಷಿಸಲು ಮತ್ತು ಅವುಗಳ ಹೊರತೆಗೆಯುವಿಕೆಗಾಗಿ ಮಾರ್ಗಸೂಚಿಯನ್ನು ರೂಪಿಸಲು ನ್ಯಾಷನಲ್ ಪ್ಲೇಸರ್ ಮಿಷನ್ ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಹಿಂದೂ ಮಹಾಸಾಗರದಲ್ಲಿ ಕೋಬಾಲ್ಟ್ ಸಮೃದ್ಧ ಸೀ ಮೌಂಟ್ ಫೆರೋ ಮ್ಯಾಂಗನೀಸ್ ಕ್ರಸ್ಟ್ (ಎಸ್ಎಫ್ಎಂಸಿ) ಅನ್ವೇಷಣೆಯಲ್ಲಿ ಭಾರತ ಪ್ರಮುಖ ಪಾತ್ರ ವಹಿಸಲಿದೆ. ಪರಿಸರ ಪ್ರಭಾವದ ಲೆಕ್ಕಪರಿಶೋಧನೆಯೊಂದಿಗೆ ಪ್ರಾಸ್ಪೆಕ್ಟಿಂಗ್ ಮತ್ತು ಮೈನಿಂಗ್‌ಗೆ ಸೂಕ್ತವಾದ ನೀತಿಗಳನ್ನು ಸಹ ರೂಪಿಸಲಾಗುವುದು. 2023 ರ ವೇಳೆಗೆ ಇಇಜೆಡ್ ಅನ್ನು ಅನ್ವೇಷಿಸಲು ಭಾರತ ಬದ್ಧವಾಗಿದೆ ಹಾಗೂ ಈ ನಿಟ್ಟಿನಲ್ಲಿ, ಅಗತ್ಯವಿದ್ದರೆ ಇತರ ಪಾಲುದಾರರ ಸಹಯೋಗದೊಂದಿಗೆ ಆಳವಾದ ಸಾಗರ ಮಟ್ಟಕ್ಕೆ ಹೋಗುವ ಮಾನವಸಹಿತ ಮುಳುಗುವ ವಾಹನವನ್ನು ಉಡಾವಣೆ ಮಾಡಲು ಉದ್ದೇಶಿಸಲಾಗಿದೆ. ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ನೀಲಿ ಆರ್ಥಿಕತೆ ಮತ್ತು ನೀಲಿ ಸಂಶೋಧನೆಯ ಮೇಲೆ ಪಠ್ಯಕ್ರಮದ ಗಮನವನ್ನು ಕೇಂದ್ರೀಕರಿಸುವ ಮೂಲಕ ಭಾರತದ ತಾಂತ್ರಿಕ ಮತ್ತು ವೈಜ್ಞಾನಿಕ ಸಿಬ್ಬಂದಿಯನ್ನು ಇನ್ನಷ್ಟು ಬಲಪಡಿಸಲಾಗುತ್ತದೆ. ಖನಿಜಗಳಿಗೆ ನಿಗದಿಪಡಿಸಿದ ಪ್ರದೇಶಗಳಲ್ಲಿ ಭಾರತವು ಅಂತರರಾಷ್ಟ್ರೀಯ ನೀರಿನಲ್ಲಿ ಪರಿಶೋಧನಾ ಚಟುವಟಿಕೆಗಳನ್ನು ಮುಂದುವರಿಸಬೇಕು.

2.21 ಸಮುದ್ರತಳದ ಸಂಪನ್ಮೂಲಗಳನ್ನು ಒಳಗೊಂಡಂತೆ, ನಮ್ಮ ಸಮುದ್ರದ ಜೀವಂತ ಮತ್ತು ನಿರ್ಜೀವ ಎರಡೂ ಸಂಪನ್ಮೂಲಗಳ ದಾಸ್ತಾನನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ, ಇದರಿಂದ ರಾಷ್ಟ್ರೀಯ ಸಮುದ್ರ ಸಂಪನ್ಮೂಲ ಡೇಟಾಬೇಸ್ ಅನ್ನು ತ್ವರಿತವಾಗಿ ರಚಿಸಲಾಗುತ್ತದೆ.

## (ಜೆ) ಸಾಗರ ಭದ್ರತೆ, ಕಾರ್ಯತಂತ್ರದ ಆಯಾಮಗಳು ಮತ್ತು ಅಂತರರಾಷ್ಟ್ರೀಯ ತೊಡಗಿಸಿಕೊಳ್ಳುವಿಕೆಗಾಗಿ ಒಂದು ಸಂಯೋಜಿತ ಚೌಕಟ್ಟು

2.22 ಭಾರತವು ನೀಲಿ ಬೆಳವಣಿಗೆಯನ್ನು ಹೆಚ್ಚಿಸಲು, ಸಮುದ್ರ ಜೈವಿಕ ವೈವಿಧ್ಯತೆಯನ್ನು ರಕ್ಷಿಸಲು ಮತ್ತು ಅದರ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡಲು ಎಲ್ಲಾ ಸಂಬಂಧಿತ ಅಂತರರಾಷ್ಟ್ರೀಯ ಪಕ್ಷಗಳು ಮತ್ತು ವೇದಿಕೆಗಳೊಂದಿಗೆ ಸಮಗ್ರವಾಗಿ ತೊಡಗಿಕೊಳ್ಳುತ್ತದೆ. ಆಫ್ರಿಕಾದ ಪೂರ್ವ ಕರಾವಳಿಯಿಂದ ಪಶ್ಚಿಮ ಪೆಸಿಫಿಕ್ ಮಹಾಸಾಗರದವರೆಗೆ ಹರಡುವ ಒಂದು ಪ್ರಮುಖ ಆರ್ಥಿಕ ಮತ್ತು ಕಾರ್ಯತಂತ್ರದ ಆಕ್ಸಿಸ್ ಅನ್ನು ಭಾರತವು ಒಪ್ಪಿಕೊಂಡಿದೆ, ಅದನ್ನು ಸೀಶೆಲ್ಸ್-ಸಿಂಗಾಪುರ್-ಸಮೋವಾ (ಎಸ್‌ಎಸ್‌ಎಸ್) ಆಕ್ಸಿಸ್ ಎಂದು ಕರೆಯಬಹುದು.

2.23 ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಆನ್ ದಿ ಲಾ ಆಫ್ ದಿ ಸೀ (ಯುಎನ್‌ಸಿಎಲ್‌ಒಎಸ್), ಮತ್ತು ಇತರ ಪ್ರಮುಖ ಸಂಧಾನಗಳಾದ ಬಯಲಾಜಿಕಲ್ ಬಯೊಡೈವರ್ಸಿಟಿ ಬಿಯಾಂಡ್ ನ್ಯಾಷನಲ್ ಜ್ಯೂರಿಸ್ಡಿಕ್ಷನ್ಸ್ (ಬಿಬಿಎನ್‌ಜೆ) ಇತ್ಯಾದಿ ಮತ್ತು ಇತರ ಬಹುಪಕ್ಷೀಯ ವೇದಿಕೆಗಳಾದ ಯುನೆಸ್ಕೋದ ಇಂಟರ್‌ಗವರ್ನಮೆಂಟಲ್ ಓಶನೋಗ್ರಾಫಿಕ್ ಕಮಿಷನ್‌ನ ಅಡಿಯಲ್ಲಿ ಕಮಿಷನ್ ಆಫ್ ದಿ ಲಿಮಿಟ್ಸ್ ಆಫ್ ದಿ ಕಾಂಟಿನೆಂಟಲ್ ಶೆಲ್ಫ್ (ಸಿಎಲ್‌ಸಿಎಸ್), ಇಂಟರ್ನ್ಯಾಷನಲ್ ಸೀಬೆಡ್ ಅಥಾರಿಟಿ (ಐಎಸ್‌ಬಿಎ), ಇಂಟರ್ನ್ಯಾಷನಲ್ ಟ್ರಿಬ್ಯೂನಲ್ ಆನ್ ಲಾ ಆಫ್ ದಿ ಸೀ (ಐಟಿಎಲ್‌ಒಎಸ್) ಸೆಟಪ್‌ನ ಕೆಲಸಕ್ಕೆ ಭಾರತವು ಮಹತ್ವದ ಕೊಡುಗೆ ನೀಡುವುದನ್ನು ಖಚಿತಪಡಿಸಿಕೊಳ್ಳಲು ಉತ್ತಮವಾಗಿ ಅಳವಡಿಸಿದ ಕಾರ್ಯವಿಧಾನವನ್ನು ಕೈಗೊಳ್ಳಲಾಗುವುದು. ಆದ್ದರಿಂದ ಈ ಸಂಸ್ಥೆಗಳಲ್ಲಿ ಬಲವಾದ ಉಪಸ್ಥಿತಿಯು ಕಡ್ಡಾಯವಾಗಿದೆ. ಪ್ರಮುಖ ಪಾಲುದಾರ ರಾಷ್ಟ್ರಗಳೊಂದಿಗೆ ಅಂತರರಾಷ್ಟ್ರೀಯ ಸಹಭಾಗಿತ್ವದ ಜೊತೆಗೆ ಸಮುದ್ರ ಡೊಮೇನ್ ಜಾಗೃತಿಯನ್ನು ಬಲಪಡಿಸಲಾಗುತ್ತದೆ. 2015 ರ ಸೆಕ್ಯುರಿಟಿ ಅಂಡ್ ಗ್ರೋತ್ ಫಾರ್ ಆಲ್ ಇನ್ ದಿ ರೀಜನ್ (ಎಸ್‌ಎಜಿಎಆರ್) ನಲ್ಲಿ ನಿರೂಪಿಸಲಾದಂತೆ ಭಾರತವು ಸುರಕ್ಷಿತ ಹಿಂದೂ ಮಹಾಸಾಗರಕ್ಕಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ, ಇದು ಕಡಲ ನೆರೆಹೊರೆಯ ದೇಶಗಳೊಂದಿಗೆ ನೀಲಿ ಆರ್ಥಿಕತೆಯ ಸಹಭಾಗಿತ್ವವನ್ನು ಗಾಢವಾಗಿಸುತ್ತದೆ. ಕಡಲ ನೆರೆಹೊರೆಯ ವಿವಿಧ ದೇಶಗಳ ಅಗತ್ಯಗಳನ್ನು ಎತ್ತಿ ತೋರಿಸುವ ಒಂದು ಮಧ್ಯಮ-ಅವಧಿಯ ಯೋಜನೆಯನ್ನು ರೂಪಿಸಲಾಗುವುದು, ಇದರಿಂದ ಅಭಿವೃದ್ಧಿಯ ನೆರವನ್ನು ಉದ್ದೇಶಿಸಲಾಗುತ್ತದೆ ಮತ್ತು ಪರಸ್ಪರ ಆದ್ಯತೆಗಳಿಗೆ ಅನುಗುಣವಾಗಿರುತ್ತದೆ. ಡಬ್ಲ್ಯುಟಿಒನಲ್ಲಿ ಮೀನುಗಾರಿಕೆ ಸಬ್ಸಿಡಿಗಳ ಕುರಿತು ನಡೆಯುತ್ತಿರುವ ವ್ಯಾಪಾರ ಸಂಧಾನಗಳು ಭಾರತ ತೊಡಗಿಸಿಕೊಳ್ಳುವ ಮತ್ತೊಂದು ಕ್ಷೇತ್ರವಾಗಿದೆ.

2.24 ಹಿಂದೂ ಮಹಾಸಾಗರದಲ್ಲಿ ಬಹುಪದರದ ಕಣ್ಗಾವಲು ಮತ್ತು ಸುರಕ್ಷತೆಯನ್ನು ವಿಶೇಷವಾಗಿ ದೇಶೀಯ ಉತ್ಪಾದನೆ ಮತ್ತು ಸಂಗ್ರಹಣೆಯ ಮೂಲಕ ಹೆಚ್ಚಿಸಲಾಗುವುದು. ಕರಾವಳಿ ಮತ್ತು ಸಮುದ್ರ ಭದ್ರತೆಯನ್ನು ಸಹ ಬಲಪಡಿಸಲಾಗುವುದು, ಅದಕ್ಕಾಗಿ ರಾಜ್ಯಗಳ ಸಹಭಾಗಿತ್ವದಲ್ಲಿ ಒಂದು ಸಮಗ್ರ ಯೋಜನೆಯನ್ನು ರೂಪಿಸಲಾಗುವುದು ಮತ್ತು ಜಾರಿಗೆ ತರಲಾಗುವುದು

## *(ಎಚ್) ಸಾಗರ ಆಡಳಿತ*

2.25 ನೀತಿಯ ಎಲ್ಲಾ ಘಟಕಾಂಶಗಳು, ಬಹುಸಂಖ್ಯೆಯ ಮಧ್ಯಸ್ಥಗಾರರು ಮತ್ತು ಅನೇಕ ಹಂತದ ಆಡಳಿತ ಅಧಿಕಾರಿಗಳು ಮತ್ತು ಕರಾವಳಿ ಸಮುದಾಯಗಳ ನಡುವಿನ ಸಮನ್ವಯ, ಸಂವಹನ ಮತ್ತು ಸ್ಪಷ್ಟತೆಯನ್ನು ಖಾತ್ರಿಪಡಿಸುವ ಒಗ್ಗೂಡಿಸುವ ಸಾಗರ ಆಡಳಿತದ ಚೌಕಟ್ಟನ್ನು ಅವಲಂಬಿಸಿವೆ. ಕರಡು ನೀತಿಯನ್ನು ಸುಸಂಬದ್ಧ ರೀತಿಯಲ್ಲಿ ಮುಂದೆ ತೆಗೆದುಕೊಂಡು ಹೋಗಿ ಕಾರ್ಯಗತಗೊಳಿಸುವ ಅವಶ್ಯಕತೆಯಿದೆ. ಇದು ಸಿಲೋಸ್‌ನಲ್ಲಿ ಕೆಲಸ ಮಾಡುವುದನ್ನು, ಪ್ರಯತ್ನಗಳ ಪುನರಾವರ್ತನೆಯನ್ನು ತಪ್ಪಿಸುತ್ತದೆ ಮತ್ತು ನೀತಿಯ ಸಾಮರಸ್ಯವನ್ನು ಸಾಧಿಸುತ್ತದೆ. ಅದರಂತೆ, ಸಮಗ್ರ ಯೋಜನೆ ಮತ್ತು ಅನುಷ್ಠಾನಕ್ಕಾಗಿ ಅಸ್ತಿತ್ವದಲ್ಲಿರುವ ಎಲ್ಲಾ ಪರಿಣತಿ ಮತ್ತು ಯೋಜನೆಗಳನ್ನು ಒಂದೇ ಮೇಲ್ವಿಚಾರಣಾ ಏಜೆನ್ಸಿಯ ಅಡಿಯಲ್ಲಿ ತರಲು ನ್ಯಾಷನಲ್ ಬ್ಲ್ಯೂ ಎಕಾನಮಿ ಕೌನ್ಸಿಲ್ (ಎನ್‌ಬಿಇಸಿ) ಎಂಬ ಅಪೆಕ್ಸ್ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

## *ನೀಲಿ ಆರ್ಥಿಕತೆ ಆಡಳಿತದ ಚೌಕಟ್ಟು*

2.26 ಎಲ್ಲಾ ಸಂಬಂಧಿತ ಮಧ್ಯಸ್ಥಗಾರರನ್ನು ಒಟ್ಟುಗೂಡಿಸುವುದರೊಂದಿಗೆ, ನ್ಯಾಷನಲ್ ಬ್ಲ್ಯೂ ಎಕಾನಮಿ ಕೌನ್ಸಿಲ್ ಅನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಸ್ಥಿರತೆಯ ನಿಯಮ, ಇತರ ಎಲ್ಲ ಪ್ರಾಧಿಕಾರಗಳು, ವಲಯದ ಚೌಕಟ್ಟುಗಳು ಮತ್ತು ಜಾರಿಯಲ್ಲಿರುವ ನೀತಿಗಳನ್ನು ಗಮನದಲ್ಲಿಟ್ಟುಕೊಂಡು ಎನ್‌ಬಿಇಸಿ ಚೌಕಟ್ಟನ್ನು ಸೇರಿಸಲು ಪ್ರಸ್ತಾಪಿಸಲಾಗಿದೆ. ಇದರಿಂದ ಅಂತರ್ಸಂಪರ್ಕಿತ ಸಮಸ್ಯೆಗಳನ್ನು ಪರಿಹರಿಸುವಾಗ ಒಂದು ಸಂಯೋಜಿತ ಕಾರ್ಯವಿಧಾನವನ್ನು ಅನುಸರಿಸಲು ಮತ್ತು ಹಣಕಾಸಿನ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸಲು ಸಾಧ್ಯವಾಗುತ್ತದೆ. ಈ ಕೌನ್ಸಿಲ್ ಈ ಕೆಳಗಿನ ಕಾರ್ಯಗಳನ್ನು ಸುಗಮಗೊಳಿಸುತ್ತದೆ:-

i) ನೀಲಿ ಆರ್ಥಿಕತೆ ಸ್ಕೀಮ್‌ಗಳು, ಯೋಜನೆಗಳು ಮತ್ತು ಗುರಿಗಳ ಸಮಯೋಚಿತ ಅನುಷ್ಠಾನವನ್ನು ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ ಮಾಡುವುದು.

ii) ನೀತಿಯ ಉದ್ದೇಶಗಳನ್ನು ಉತ್ತೇಜಿಸಲು ಮಾರ್ಗಸೂಚಿಗಳು/ನಿರ್ದೇಶನಗಳನ್ನು ಒದಗಿಸುವುದು.

iii) ನೀಲಿ ಆರ್ಥಿಕತೆಯಲ್ಲಿ ಅಂತರರಾಷ್ಟ್ರೀಯ ಸಹಕಾರ, ಸಾಮರ್ಥ್ಯ ವೃದ್ಧಿಯಲ್ಲಿ ಸಚಿವಾಲಯಗಳು/ಇಲಾಖೆಗಳಿಗೆ ಮಾರ್ಗಸೂಚಿಗಳು/ನಿರ್ದೇಶನಗಳನ್ನು ಒದಗಿಸುವುದು.

iv) ಅಗತ್ಯವಿರುವ ಕಡೆಗಳಲ್ಲಿ ಸುಂಕ ನಿಗದಿಪಡಿಸುವಿಕೆ, ಮೀನುಗಾರಿಕೆ ಸಬ್ಸಿಡಿ ಸಂಧಾನಗಳು ಮತ್ತು ನಿಯಂತ್ರಕ ಸಮಸ್ಯೆಗಳ ಬಗ್ಗೆ ಮಾರ್ಗಸೂಚಿಗಳು/ನಿರ್ದೇಶನಗಳನ್ನು ಒದಗಿಸುವುದು.

ಅನ್ವೇಷಣೆ, ಸಾರಿಗೆ, ಸಂಗ್ರಹಣೆ ಮುಂತಾದ ಕಡಲಾಚೆಯ ಚಟುವಟಿಕೆಗಳಿಗೆ ಅನುಮತಿ ನೀಡುವುದು, ಗುತ್ತಿಗೆ, ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಭಾರತವು ಒಂದು ನಿರ್ದಿಷ್ಟ ಸಾಂಸ್ಥಿಕ ಚೌಕಟ್ಟನ್ನು ಅಥವಾ ಸಂಪೂರ್ಣ/ಸಮಗ್ರ ನಿಯಮಗಳನ್ನು ಹೊಂದಿಲ್ಲ. ಎಂಎನ್‌ಆರ್‌ಇಯಂತಹ ಕೆಲವು ಇಲಾಖೆಯಗಳು ಇದನ್ನು ಮಾಡಲು ಪ್ರಯತ್ನಿಸಿವೆ. ಆದ್ದರಿಂದ, ಭಾರತದಲ್ಲಿ ಎಲ್ಲಾ ಸಾಗರ ಸಂಪನ್ಮೂಲ-ಖನಿಜಗಳು, ಆಳ ಸಮುದ್ರದ ಮೀನುಗಾರಿಕೆ ಸಂಪನ್ಮೂಲಗಳು, ಕಡಲಾಚೆಯ ಇಂಧನ ಅಭಿವೃದ್ಧಿ ಇತ್ಯಾದಿಗಳ ಪರಿಸರ ನಿರ್ವಹಣೆಗಾಗಿ ಒಂದು ತಡೆರಹಿತ ಆಡಳಿತ ರಚನೆಯನ್ನು ರೂಪಿಸುವ ತುರ್ತು ಅವಶ್ಯಕತೆಯಿದೆ. ಇದು ಇಲಾಖೆಗಳು ಮತ್ತು ರಾಜ್ಯ ಸರ್ಕಾರಗಳಾದ್ಯಂತ ಸಮನ್ವಯವನ್ನು ಶಕ್ತಗೊಳಿಸುತ್ತದೆ ಹಾಗೂ ವಿಭಿನ್ನ ನಿಯಂತ್ರಕ ಮತ್ತು ಆಡಳಿತ ವಿಧಾನಗಳೊಂದಿಗೆ ಅಂತರರಾಷ್ಟ್ರೀಯ ಅನುಭವಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಇದು ಉದ್ದೇಶಿತ ಎನ್‌ಬಿಇಸಿಯ ಪ್ರಮುಖ ಜವಾಬ್ದಾರಿಯಾಗಿದೆ.

2.27 ಈ ಸಂಸ್ಥೆಯು ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ವಿವಿಧ ಮಧ್ಯಸ್ಥಗಾರರ ನಡುವೆ ಯೋಜನಾ ಪ್ರಕ್ರಿಯೆಯನ್ನು ಸಂಯೋಜಿಸುವ ಅಪೆಕ್ಸ್ ಸಂಸ್ಥೆಯಾಗಿದೆ. ಇದು ಉದ್ಯಮ, ಸಂಶೋಧನಾ ಸಂಸ್ಥೆಗಳು ಮತ್ತು ನೀತಿ ಸಮರ್ಥನೆ ಗುಂಪುಗಳ ಪ್ರತಿನಿಧಿಗಳನ್ನು ಸಹ ಒಳಗೊಂಡಿರುತ್ತದೆ.

ಕೌನ್ಸಿಲ್ ಸದಸ್ಯರು ಭೂ ವಿಜ್ಞಾನ, ವಿದೇಶಾಂಗ ವ್ಯವಹಾರ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ, ಗಣಿಗಾರಿಕೆ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರವಾಸೋದ್ಯಮ, ರಕ್ಷಣೆ, ವಾಣಿಜ್ಯ, ಹಡಗು, ಹಣಕಾಸು ಮತ್ತು ಎನ್‌ಎಸ್‌ಎಯ ಸಚಿವಾಗಿರಬಹುದು. ಇದಲ್ಲದೆ, ಕರಾವಳಿ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಎನ್‌ಐಟಿಐ ಆಯೋಗದ ಉಪಾಧ್ಯಕ್ಷರೊಂದಿಗೆ ಸದಸ್ಯರಾಗಿರುತ್ತಾರೆ. ಎಫ್‌ಐಸಿಸಿಐ, ಎಎಸ್‌ಎಸ್‌ಒಸಿಹೆಚ್‌ಎಎಂ ಮತ್ತು ಸಿಐಐ ನ ಅಧ್ಯಕ್ಷರು ಸಹ ಆಹ್ವಾನಿತರಾಗಬಹುದು ಹಾಗೂ ಭೂ ವಿಜ್ಞಾನ ಇಲಾಖೆಯ ಕಾರ್ಯದರ್ಶಿಯು ಸದಸ್ಯ-ಕಾರ್ಯದರ್ಶಿಯಾಗಬಹುದು.

ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು, ಯೋಜನೆಗಳು ಮತ್ತು ಕಾರ್ಯತಂತ್ರಗಳನ್ನು ಅನುಮೋದಿಸಲು ಮತ್ತು ಸಾಧನೆಗಳನ್ನು ಪರಿಶೀಲಿಸಲು ಕೌನ್ಸಿಲ್ ವರ್ಷಕ್ಕೊಮ್ಮೆಯಾದರೂ ಸಭೆ ನಡೆಸಬೇಕಾಗುತ್ತದೆ

2.28 ವಿವಿಧ ಕ್ರಿಯಾಶೀಲ ಅಂಶಗಳ ಅನುಷ್ಠಾನಕ್ಕೆ ಕಾರ್ಯಕಾರಿ ಸಮಿತಿಯ ಅಗತ್ಯವಿರುತ್ತದೆ, ಅದು ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳಿಂದ ಕಾರ್ಯಗತಗೊಳ್ಳುವ ಯೋಜನೆಗಳ ಅನುಷ್ಠಾನ, ಸಮನ್ವಯ ಮತ್ತು ಮೇಲ್ವಿಚಾರಣೆಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಅಂತೆಯೇ, ಕೌನ್ಸಿಲ್ ಅದರ ಕಾರ್ಯಕಾರಿ ಸಮಿತಿಯ ಮೂಲಕ ಕಾರ್ಯನಿರ್ವಹಿಸುತ್ತದೆ, ಅದರಲ್ಲಿ ಮಂತ್ರಿಯು ಅಧ್ಯಕ್ಷರಾಗಿ, ಎನ್‌ಐಟಿಐ ಆಯೋಗದ ಸಿಇಒ ಆಗಿರುವ ಎಂಒಇಎಸ್ ಉಪಾಧ್ಯಕ್ಷರಾಗಿ ಮತ್ತು ಭೂ ವಿಜ್ಞಾನ ಇಲಾಖೆಯ ಕಾರ್ಯದರ್ಶಿಯು ಸದಸ್ಯ-ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಹಣಕಾಸು ಸಚಿವಾಲಯದ (ಖರ್ಚು ಇಲಾಖೆ) ಕಾರ್ಯದರ್ಶಿಗಳು, ವಿದೇಶಾಂಗ ವ್ಯವಹಾರ, ಹೊಸ ಮತ್ತು ನವೀಕರಿಸಬಹುದಾದ ಇಂಧನ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರವಾಸೋದ್ಯಮ, ರಕ್ಷಣೆ, ಹಡಗು, ವಾಣಿಜ್ಯ ಮತ್ತು ಕರಾವಳಿ ರಾಜ್ಯಗಳ ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಗಳು, ಎನ್‌ಎಸ್‌ಎ ಪ್ರತಿನಿಧಿ ಮತ್ತು ಸಂಬಂಧಪಟ್ಟ ಕೈಗಾರಿಕಾ ಸಂಘಗಳ ಹಿರಿಯ ಪ್ರತಿನಿಧಿಗಳು ಸದಸ್ಯರಾಗಬಹುದು

ಕಾರ್ಯಕಾರಿ ಸಮಿತಿಯು ಈ ಕೆಳಗೆ ಉಲ್ಲೇಖಿಸಿದ ನಿಯಮಗಳನ್ನು ಹೊಂದಿರಬಹುದು:

(i) ನ್ಯಾಷನಲ್ ಬ್ಲ್ಯೂ ಎಕಾನಮಿ ಕೌನ್ಸಿಲ್‌ನ ಶಿಫಾರಸುಗಳ ಅನುಷ್ಠಾನದಲ್ಲಿ ಸಚಿವಾಲಯಗಳು/ಇಲಾಖೆಗಳಿಗೆ ಅನುಕೂಲ ಮತ್ತು ಬೆಂಬಲ ಒದಗಿಸುವುದು

(ii) ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳು ನಿರ್ವಹಿಸುತ್ತಿರುವ ಯೋಜನೆಗಳ ಅನುಷ್ಠಾನ, ಸಮನ್ವಯ ಮತ್ತು ಮೇಲ್ವಿಚಾರಣೆಯನ್ನು ಕೈಗೊಳ್ಳುವುದು

(iii) ನೀಲಿ ಆರ್ಥಿಕತೆಯಲ್ಲಿ ಅಂತರರಾಷ್ಟ್ರೀಯ ಸಹಕಾರ, ಸಾಮರ್ಥ್ಯ ವೃದ್ಧಿಯಲ್ಲಿ ಸಚಿವಾಲಯಗಳು/ಇಲಾಖೆಗಳಿಗೆ ಬೆಂಬಲವನ್ನು ಒದಗಿಸುವುದು

(iv) ಅಗತ್ಯವಿರುವ ಕಡೆ ಸುಂಕ ನಿಗದಿಪಡಿಸುವಿಕೆ, ಮೀನುಗಾರಿಕೆ ಸಬ್ಸಿಡಿ ಸಂಧಾನ ಮತ್ತು ನಿಯಂತ್ರಕ ಸಮಸ್ಯೆಗಳಲ್ಲಿ ಸಚಿವಾಲಯಗಳು/ಇಲಾಖೆಗಳಿಗೆ ಸಹಕಾರ ಒದಗಿಸುವುದು

ಸಮಿತಿಯು ಅಗತ್ಯವಿದ್ದಾಗ, ವರ್ಷಕ್ಕೆ ಕನಿಷ್ಠ ಮೂರು ಬಾರಿಯಾದರೂ, ಸಭೆ ಸೇರುವ ನಿರೀಕ್ಷೆಯಿದೆ. ಕೌನ್ಸಿಲ್ ಸೂಕ್ತವಾದ ಹಿರಿತನ ಶ್ರೇಣಿ ಮತ್ತು ಅನುಭವ ಹೊಂದಿರುವ ಗೊತ್ತುಪಡಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಯನ್ನು ಹೊಂದಿರುತ್ತದೆ. ಆದಾಗ್ಯೂ, ನೀತಿ ಚೌಕಟ್ಟನ್ನು ಅಂತಿಮಗೊಳಿಸುವ ಮೊದಲು ಸೂಚಿಸಲಾದ ಕೌನ್ಸಿಲ್ ಮತ್ತು ಕಾರ್ಯಕಾರಿ ಸಮಿತಿಯ ಅವಶ್ಯಕತೆಗಳನ್ನು ಎಂಒಇಎಸ್‌ನೊಂದಿಗೆ ಸಮಾಲೋಚಿಸಿ ಮೌಲ್ಯಮಾಪನ ಮಾಡಬಹುದು..

## *ರಾಷ್ಟ್ರೀಯ ನೀಲಿ ಆರ್ಥಿಕತೆ ನಿಧಿ (ಎನ್‌ಬಿಇಎಫ್)*

2.29 ಎನ್‌ಬಿಇಸಿ ಅಡಿಯಲ್ಲಿ ವಿವಿಧ ಉಪಕ್ರಮಗಳನ್ನು ಕಾರ್ಯಗತಗೊಳಿಸಲು ನೀಲಿ ಆರ್ಥಿಕತೆ ನಿಧಿಯನ್ನು, ಭಾಗವಹಿಸುವ ಸಚಿವಾಲಯಗಳು/ಇಲಾಖೆಗಳಿಂದ ಆಡಳಿತಾತ್ಮಕ ವ್ಯವಸ್ಥೆಯ ಮೂಲಕ ಅಥವಾ ಎನ್‌ಬಿಇಸಿಯ ಆಡಳಿತ ಮಂಡಳಿಯ ನಿಯಂತ್ರಣದಲ್ಲಿ ಸ್ವತಂತ್ರ ಬಜೆಟ್ ಐಟಂ ಆಗಿ ವ್ಯವಸ್ಥೆಗೊಳಿಸಲಾಗುವುದು. ಭಾರತಕ್ಕೆ ಕಾರ್ಯತಂತ್ರದ ಪ್ರಾಮುಖ್ಯತೆಯುಳ್ಳ ಕ್ರಾಸ್ ಕಟ್ಟಿಂಗ್ ಯೋಜನೆಗಳನ್ನು ಪ್ರಾರಂಭಿಸುವುದು ಮತ್ತು ಬೆಂಬಲಿಸುವುದು ಇದರ ಉದ್ದೇಶವಾಗಿದೆ.

## *ಮಧ್ಯಮ ಅವಧಿಯ ಉದ್ದೇಶಗಳು*

ಸಮಸ್ಯೆಗಳು ಸಮಯ ಕಳೆದಂತೆ ಕಂಡುಬರುತ್ತವೆ, ಆದಾಗ್ಯೂ ಈ ಕೆಳಗಿನ ಕ್ರಿಯಾತ್ಮಕ ಅಂಶಗಳನ್ನು ತಾತ್ಕಾಲಿಕವಾಗಿ ಮಧ್ಯಮ ಅವಧಿಯಲ್ಲಿ ಊಹಿಸಲಾಗಿದೆ.

## *ನೀಲಿ ಆರ್ಥಿಕತೆ ಶಾಸನ*

2.30 ನೀಲಿ ಆರ್ಥಿಕತೆಗೆ ಸೂಕ್ತವಾದ ಶಾಸಕಾಂಗ ಚೌಕಟ್ಟನ್ನು ಮಧ್ಯಮ ಅವಧಿಯಲ್ಲಿ ರೂಪಿಸುವ ಅವಶ್ಯಕತೆಯಿದೆ. ಅಗತ್ಯಗಳ ಮೌಲ್ಯಮಾಪನದ ಆಧಾರದ ಮೇಲೆ, ಅಭಿವೃದ್ಧಿ, ನಿಯಂತ್ರಣ ಮತ್ತು ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ವಿಶಾಲವಾದ ಶಾಸನ ಮತ್ತು/ಅಥವಾ ಸಂಬಂಧಿತ ಸಚಿವಾಲಯಗಳಿಗೆ ಸಂಬಂಧಿಸಿದ ನಿರ್ದಿಷ್ಟ ಕಾನೂನುಗಳನ್ನು ಪರಿಶೀಲಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಜಾರಿಗೊಳಿಸಬಹುದು. ಆದಾಗ್ಯೂ, ಸದ್ಯದಲ್ಲಿ ಎನ್‌ಬಿಇಸಿಯಂತಹ ಸಂಸ್ಥೆಯ ಸಾಂಸ್ಥಿಕ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡಲು ಉದ್ದೇಶಿತ ನೀತಿ ಚೌಕಟ್ಟು ಸಾಕಾಗುತ್ತದೆ. ಭವಿಷ್ಯದ ಶಾಸನವನ್ನು ಸಿಎಮ್‌ಎಸ್‌ಪಿಗೆ ಪರಿಗಣಿಸಬಹುದು, ಅದಕ್ಕಾಗಿ ಎನ್‌ಬಿಇಸಿ ಆಡಳಿತ ಮಂಡಳಿಯಾಗಿರಬಹುದು.

## *ವರ್ಧಿತ ಸಾಮರ್ಥ್ಯಗಳು*

2.31 ನೀಲಿ ಆರ್ಥಿಕತೆಯನ್ನು ಪ್ರಮುಖ ಬೆಳವಣಿಗೆ ಮತ್ತು ಉದ್ಯೋಗ ಗುಣಕವೆಂದು ನೋಡಬೇಕು. ಇದು ಪ್ರತಿಭೆಯ ಸಮೂಹದಲ್ಲಿ ಅದರ ಘಟಕ ಕ್ಷೇತ್ರಗಳಿಗೆ ಅವಶ್ಯಕ ಸಾಮರ್ಥ್ಯಗಳನ್ನು ಉತ್ಪಾದಿಸುವ ಅಗತ್ಯವನ್ನು ಸೃಷ್ಟಿಸುತ್ತದೆ. ಇದಕ್ಕೆ ನೀಲಿ ಆರ್ಥಿಕತೆಯತ್ತ ಉನ್ನತ ಶಿಕ್ಷಣ ಕೋರ್ಸ್‌ಗಳನ್ನು ಆಧರಿಸುವುದು ಅಗತ್ಯವಾಗಿರುತ್ತದೆ. ಅದೇ ಸಮಯದಲ್ಲಿ, ನೀಲಿ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ

ಪ್ರತಿಭೆಯ ಸಮೂಹವನ್ನು ಬಳಸಿಕೊಳ್ಳಲು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷನ್ ಟೆಕ್ನಾಲಜಿ ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷನೊಗ್ರಫಿ ಮುಂತಾದ ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳೊಂದಿಗೆ ಸಂಪರ್ಕಗಳನ್ನು ಸ್ಥಾಪಿಸಬೇಕಾಗಿದೆ. ಹೊಸ ಶಿಕ್ಷಣ ನೀತಿಯ ಚೌಕಟ್ಟಿನೊಳಗೆ ನೀಲಿ ಆರ್ಥಿಕತೆಯ ಬಗ್ಗೆ ಹೊಸ ಪಠ್ಯಕ್ರಮವನ್ನು ರೂಪಿಸುವುದರ ಜೊತೆಗೆ, ನೀಲಿ ಆರ್ಥಿಕತೆಯ ವಿವಿಧ ಕ್ಷೇತ್ರಗಳಿಗೆ ಮತ್ತು ವಿವಿಧ ಹಂತಗಳಲ್ಲಿ ದೇಶದಲ್ಲಿ ಅಗತ್ಯವಾದ ಮಾನವ ಸಂಪನ್ಮೂಲ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸುವ ಅಗತ್ಯವಿದೆ. ಇದನ್ನು ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಭೂ ವಿಜ್ಞಾನ ಇಲಾಖೆಗಳು ಜಂಟಿಯಾಗಿ ನಿರ್ವಹಿಸಬಹುದು.

## *ಸ್ವಚ್ಛ ಭಾರತದಿಂದ ಸ್ವಚ್ಛ ಪೃಥ್ವಿ, ಸ್ವಚ್ಛ ಸಾಗರ*

2.32 ಮಾನ್ಯ ಪ್ರಧಾನಿಮಂತ್ರಿಯವರು 2014 ರ ಅಕ್ಟೋಬರ್ 2 ರಂದು ಪ್ರಾರಂಭಿಸಿದ ಸ್ವಚ್ಛ ಭಾರತ ಅಭಿಯಾನವು (ಎಸ್‌ಬಿಎಂ) ವಿಶ್ವದ ಅತಿದೊಡ್ಡ ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ ಮತ್ತು ನಡವಳಿಕೆ ಬದಲಾವಣೆ ಕಾರ್ಯಕ್ರಮವಾಗಿದೆ. ಅದು ಈಗಾಗಲೇ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗಮನಾರ್ಹ ಪ್ರಭಾವವನ್ನು ಬೀರಿದೆ.

ಇಂದು, ಸಮುದ್ರ ಮಾಲಿನ್ಯವು ಸಾಗರಗಳ ಆರೋಗ್ಯಕ್ಕೆ ದೊಡ್ಡ ಅಪಾಯವಾಗಿದೆ. ಸುಮಾರು 80% ಸಮುದ್ರ ಮಾಲಿನ್ಯವು ಭೂ ಆಧಾರಿತ ಮೂಲಗಳಿಂದ ವಿಶೇಷವಾಗಿ ಕರಾವಳಿ ನಗರಗಳು ಮತ್ತು ಸಮುದಾಯಗಳಿಂದ ಉಂಟಾಗುತ್ತದೆ. ಆದ್ದರಿಂದ, ಸ್ವಚ್ಛ ಭಾರತ ವಿಧಾನ ಮತ್ತು ಅನುಷ್ಠಾನವನ್ನು 'ಸ್ವಚ್ಛ ಪೃಥ್ವಿ, ಸ್ವಚ್ಛ ಸಾಗರ' ಪರಿಕಲ್ಪನೆಗೆ ವಿಸ್ತರಿಸುವುದು ಈಗ ಅಗತ್ಯವಾಗಿದೆ. ಇದು ಮಾನವ ಮತ್ತು ಕೈಗಾರಿಕಾ ತ್ಯಾಜ್ಯ ನಿರ್ವಹಣಾ ಕಾರ್ಯತಂತ್ರಗಳಿಗೆ ವಿಶೇಷವಾಗಿ ಕರಾವಳಿ ಪ್ರದೇಶಗಳಲ್ಲಿ ಭೂಮಿ ಮತ್ತು ನೀರು ಆಧಾರಿತ ಮಧ್ಯಸ್ಥಿಕೆಗಳ ನಡುವೆ ಒಮ್ಮುಖವನ್ನು ಸಾಧಿಸುವ ವಿಶಿಷ್ಟ ಮತ್ತು ಸಮಗ್ರ ಧ್ಯೇಯವನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಭಾರತವು ಜಾಗತಿಕ ಮಟ್ಟದಲ್ಲಿ ಅಂತಹ ಧ್ಯೇಯವನ್ನು ಸೃಷ್ಟಿಸಿದ ಮೊದಲ ದೇಶವಾಗುತ್ತದೆ. ಈ ವಿಶಿಷ್ಟ ವಿಧಾನವನ್ನು ಅನುಷ್ಠಾನಗೊಳಿಸಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ, ನಗರಾಭಿವೃದ್ಧಿ ಮತ್ತು ಭೂ ವಿಜ್ಞಾನ ಇಲಾಖೆಗಳು ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಮತ್ತು ಕರಾವಳಿ ಸಮುದಾಯಗಳೊಂದಿಗೆ ಪಾಲುದಾರಿಕೆ ಮಾಡಬೇಕಾಗುತ್ತದೆ.

## *ಮುಕ್ತಾಯ*

2.33 ಕರಡು ನೀತಿಯು ಮುಂದಿನ ಐದು ವರ್ಷಗಳಲ್ಲಿ ಭಾರತದ ಜಿಡಿಪಿಗೆ ನೀಲಿ ಆರ್ಥಿಕತೆಯ ಕೊಡುಗೆಯನ್ನು ಗಮನಾರ್ಹವಾಗಿ ಹೆಚ್ಚಿಸುವ, ಕರಾವಳಿ ಸಮುದಾಯಗಳ ಜೀವನವನ್ನು ಸುಧಾರಿಸುವ, ನಮ್ಮ ಸಮುದ್ರ ಜೀವವೈವಿಧ್ಯತೆಯನ್ನು ಸಂರಕ್ಷಿಸುವ ಹಾಗೂ ನಮ್ಮ ಸಮುದ್ರ ಪ್ರದೇಶಗಳು ಮತ್ತು ಸಂಪನ್ಮೂಲಗಳ ಸುರಕ್ಷತೆಯನ್ನು ಕಾಪಾಡಿಕೊಳ್ಳುವ ಗುರಿಯನ್ನು ಹೊಂದಿದೆ. ಇಂದು, ನೀಲಿ ಆರ್ಥಿಕತೆಯು ಆರ್ಥಿಕ ಬೆಳವಣಿಗೆ ಮತ್ತು ಯೋಗಕ್ಷೇಮದ ಮುಂದಿನ ವರ್ಧಕ ಎಂಬ ಭರವಸೆಯನ್ನು ಹೊಂದಿದೆ, ಕಾರ್ಯತಂತ್ರವು ಸುಸ್ಥಿರತೆ ಮತ್ತು ಸಾಮಾಜಿಕ-ಆರ್ಥಿಕ ಕಲ್ಯಾಣವನ್ನು ಕೇಂದ್ರ ಭಾಗದಲ್ಲಿ ಇರಿಸುತ್ತದೆ. ಆದ್ದರಿಂದ, ನೀಲಿ ಆರ್ಥಿಕತೆ ನೀತಿಯನ್ನು ರೂಪಿಸುವ ಉದ್ದೇಶಿತ ಮಾರ್ಗಸೂಚಿಯು ಆರ್ಥಿಕ ಬೆಳವಣಿಗೆ ಮತ್ತು ಕಲ್ಯಾಣದ ಸಾಮರ್ಥ್ಯವನ್ನು ಬಹಿರಂಗಪಡಿಸುವ ನಿರ್ಣಾಯಕ ಹೆಜ್ಜೆಯಾಗಿದೆ.

